22 ಆಗಸ್ಟ್ 2025 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 164 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಬಡವರಿಗೆ ಕೈಗೆಟುಕುವ ದರದಲ್ಲಿ ಕ್ಯಾನ್ಸರ್ ಚಿಕಿತ್ಸೆ ಒದಗಿಸಲು ಇಮ್ಯುನೋಥೆರಪಿಗೆ ಬಳಸುವ ಔಷಧಿಗಳು ಹಾಗೂ ರೇಡಿಯೋಥೆರಪಿ ಉಪಕರಣಗಳಿಗೆ ಕಸ್ಟಮ್ಸ್ ಸುಂಕ ವಿನಾಯಿತಿ ನೀಡಬೇಕೆಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಮನವಿ ಮಾಡಿದರು.



ಥಿಯೇಟರ್ ಒಟಿಟಿಯಲ್ಲಿ ಬಿಡುಗಡೆಯಾಗೋ ಸಿನಿಮಾನಗಳು » 2



ಡ್ರಗ್ಸ್‌ಗೆ ಕಡಿವಾಣ ಹಾಕಲು ಹೇಳಿದರೆ ನಕ್ಕು ಸುಮ್ಮನಾದರು » 3



ಕೊಣನೂರು-ಕಟ್ಟೇಪುರ ನಡುವೆ ಸೇತುವೆ ನಿರ್ಮಿಸಿ » 4

## ಗದ್ದಲದಲ್ಲೇ ಸಂಸತ್ ಅಧಿವೇಶನ ಮುಕ್ತಾಯ

### ಲೋಕಸಭೆಯಲ್ಲಿ 14 ಮಸೂದೆ ಮಂಡನೆ, 12 ಅಂಗೀಕಾರ | 419 ಪ್ರಶ್ನೆಗಳಲ್ಲಿ 55 ಪ್ರಶ್ನೆಗಳಿಗಷ್ಟೇ ಮೌಖಿಕ ಉತ್ತರ

• ಪ್ರಜೋದಯ ವರದಿ

**ನವದೆಹಲಿ:** ಒಂದು ತಿಂಗಳ ಕಾಲ ನಡೆದ ಸಂಸತ್ ಮುಂಗಾರು ಅಧಿವೇಶನಕ್ಕೆ ಗುರುವಾರ ತೆರೆ ಬಿದ್ದಿದೆ. ಪ್ರತಿಪಕ್ಷಗಳ ಪ್ರತಿಭಟನೆ, ಮುಂದೂಡಿಕೆ ಮತ್ತು ಸಭಾತ್ಯಾಗದ ನಡುವೆಯೇ ಲೋಕಸಭೆಯಲ್ಲಿ 12 ಮಸೂದೆಗಳು ಮತ್ತು ರಾಜ್ಯಸಭೆಯಲ್ಲಿ 15 ಮಸೂದೆಗಳನ್ನು ಅಂಗೀಕರಿಸಲಾಗಿದೆ.

ಎರಡೂ ಸದನಗಳಲ್ಲಿ ಆಪರೇಷನ್ ಸಿಂಧೂರ ಕುರಿತ ಚರ್ಚೆ ಹೊರತುಪಡಿಸಿ, ಇತರೆ ಯಾವುದೇ ವಿಷಯದ ಬಗ್ಗೆ ಚರ್ಚೆ ನಡೆಯಲೇ ಇಲ್ಲ. ಆಪರೇಷನ್ ಸಿಂಧೂರ ಕುರಿತು ಚರ್ಚೆಗೆ ಆರಂಭದಲ್ಲಿ ಒತ್ತಾಯಿಸಿದ್ದ ವಿರೋಧ ಪಕ್ಷಗಳು, ನಂತರ ಬಿಹಾರದಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಚರ್ಚೆಗೆ ಆಗ್ರಹಿಸಿ ಪ್ರತಿಭಟನೆ ಮುಂದುವರೆಸಿದವು. ಪ್ರತಿಪಕ್ಷಗಳ ನಿರಂತರ ಪ್ರತಿಭಟನೆ ಮತ್ತು ಗದ್ದಲದ ನಡುವೆ ಸಂಸತ್ ಮಾನ್ಸೂನ್ ಅಧಿವೇಶನ ಮುಕ್ತಾಯಗೊಂಡಿತು.

**ಲೋಕಸಭೆ ಅಂಗೀಕರಿಸಿದ ಮಸೂದೆಗಳು**

ಲೋಕಸಭೆಯಲ್ಲಿ ಗೋವಾ ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಮರುಹೊಂದಾಣಿಕೆ ಮಸೂದೆ, ಮರ್ಚೆಂಟ್ ಶಿಪ್ಪಿಂಗ್ ಮಸೂದೆ, ಮಣಿಪುರ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆ, ಮಣಿಪುರ ವಿನಿಯೋಗ (ಸಂ.2) ಮಸೂದೆ, ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ ಮತ್ತು ರಾಷ್ಟ್ರೀಯ ಡೋಪಿಂಗ್ ವಿರೋಧಿ(ತಿದ್ದುಪಡಿ) ಮಸೂದೆ, ಆದಾಯ ತೆರಿಗೆ ಮಸೂದೆ 2025, ತೆರಿಗೆ ಕಾನೂನುಗಳು(ತಿದ್ದುಪಡಿ) ಮಸೂದೆ, ಭಾರತೀಯ ಬಂದರು ಮಸೂದೆ 2025 ಮತ್ತು ಆನ್‌ಲೈನ್ ಗೇಮಿಂಗ್‌ನ ಪ್ರಚಾರ ಮತ್ತು ನಿಯಂತ್ರಣ ಮಸೂದೆ 2025 ಸೇರಿದಂತೆ 12 ಮಸೂದೆಗಳನ್ನು ಅಂಗೀಕರಿಸಲಾಯಿತು.



**120 ಗಂಟೆ ಪೈಕಿ ಕೇವಲ 37 ಗಂಟೆ ಚರ್ಚೆ**

ಸದನದಲ್ಲಿ ಒಟ್ಟು 419 ಪ್ರಶ್ನೆಗಳನ್ನು ಕೇಳಲಾಗಿದ್ದು, ಕೇವಲ 55 ಪ್ರಶ್ನೆಗಳಿಗಷ್ಟೇ ಮೌಖಿಕವಾಗಿ ಉತ್ತರಿಸಲಾಯಿತು. ಎಲ್ಲರೂ ಆರಂಭದಲ್ಲಿ 120 ಗಂಟೆಗಳ ಕಾಲ ಚರ್ಚಿಸುವುದಾಗಿ ನಿರ್ಧರಿಸಿದ್ದರು. ಆದರೆ, ನಿರಂತರ ಕಲಾಪ ಮುಂದೂಡಿಕೆ, ಸಭಾತ್ಯಾಗ, ಪ್ರತಿಭಟನೆಯ ಕಾರಣಗಳಿಂದಾಗಿ ಕೇಲವ 37 ಗಂಟೆಗಳ ಕಾಲವಷ್ಟೇ ಚರ್ಚಿಸಲಾಯಿತು ಎಂದು ಸ್ಪೀಕರ್ ವಿವರ ನೀಡಿದರು.

**ರಾಜ್ಯಸಭೆಯಲ್ಲಿ ಅಂಗೀಕಾರ**

ಸರಕು ಸಾಗಣೆ ಮಸೂದೆ, ಸಮುದ್ರದ ಮೂಲಕ ಸರಕುಗಳ ಸಾಗಣೆ ಮಸೂದೆ, ಕರಾವಳಿ ಸಾಗಣೆ ಮಸೂದೆ, ಮಣಿಪುರ ಸರಕು ಮತ್ತು ಸೇವಾ ತೆರಿಗೆ(ತಿದ್ದುಪಡಿ) » ನಾಲ್ಕನೇ ಪುಟದಲ್ಲಿ

## ಮಲೆನಾಡು ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ನೀಡಿ

### 35 ಕೋಟಿ ರೂ.ಗೆ ಸಿಮೆಂಟ್ ಮಂಜು ಬೇಡಿಕೆ | ನಾಲೆ ದುರಸ್ತಿಗೆ ಸದನದಲ್ಲಿ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಭಾರೀ ಮಳೆಯಿಂದ ಮಲೆನಾಡು ಭಾಗದಲ್ಲಿ ಹೆಚ್ಚಿನ ಪ್ರಮಾಣದ ಹಾನಿ ಸಂಭವಿಸಿ ದ್ದರೂ ಮಲೆನಾಡು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೇವಲ 35 ಲಕ್ಷ ರೂ. ಅನುದಾನ ನೀಡಲಾಗಿದೆ. ಕನಿಷ್ಠ 35 ಕೋಟಿ ರೂ. ಅನುದಾನ ನೀಡಿದರೆ ಅನು ಕೂಲವಾಗುತ್ತದೆಂದು ಶಾಸಕ ಸಿಮೆಂಟ್ ಮಂಜು ಅವರು ಒತ್ತಾಯಿಸಿದರು.



ಅಧಿವೇಶದಲ್ಲಿ ಮಾತನಾಡಿದ ಅವರು, ಯಾವುದೇ ಸರ್ಕಾರ ಶಿಕ್ಷಣ, ಆರೋಗ್ಯ, ನೀರಾವರಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದರೆ ರಾಜ್ಯ ಸುಭಿಕ್ಷ ವಾಗಿರುತ್ತದೆ. ನನ್ನ ಕ್ಷೇತ್ರ ವ್ಯಾಪ್ತಿಯ ಮಲೆನಾಡು ಭಾಗದಲ್ಲಿ ಅತೀ ಹೆಚ್ಚು ಮಳೆಯಿಂದ ಅಪಾರ ಪ್ರಮಾಣದ ಬೆಳೆ ಹಾನಿ ಯಾಗಿದೆ. ಬೆಳೆಗೆ ಹಾಕಿರುವ ಗೊಬ್ಬರವೂ ಕೊಚ್ಚಿ ಹೋಗಿದೆ. ಇಲ್ಲಿ ಸುರಿಯುವ ಮಳೆಯಿಂದ ಬಯಲು ಸೀಮೆಗೆ ಅನು ಕೂಲ ಮಾಡಿಕೊಡುತ್ತವೆ. ಆದರೆ, ಲಕ್ಷಾಂತರ ರೂ. ನಷ್ಟ ಹಾಗು ಬೆಳೆ ಹಾನಿ ಸಂಭವಿಸುತ್ತದೆಂದು ಸರ್ಕಾರದ ಗಮನ ಸೆಳೆದರು.

ಅತೀ ಹೆಚ್ಚು ಮಳೆಯಿಂದ ಕಾಫಿ ಬೆಳೆ ಕೊಳೆ ರೋಗಕ್ಕೆ ತುತ್ತಾಗಿದೆ. ಕಾಳು ಮೆಣಸು ಬಳ್ಳಿಗೆ ಹಳದಿ ರೋಗ ಬಂದಿದೆ. ಮೆಕ್ಕೆಜೋಳಕ್ಕೆ ಬಿಳಿಸುಳಿ ರೋಗದಿಂದ ಹಾನಿಯಾಗಿದೆ. ಹೀಗಾದರೆ ನಾವೆಲ್ಲಿಗೆ ಹೋಗಬೇಕು. ನಮ್ಮಲ್ಲಿ ವಾಟೆಹೊಳೆ, ಯಗಚಿ ಜಲಾಶಯವಿದೆ, ಎತ್ತಿನಹೊಳೆ ಯೋಜನೆ ನಮ್ಮ ಕ್ಷೇತ್ರದಿಂದಲೇ ಬರುತ್ತದೆ. ಆದರೆ, ನಮ್ಮಲ್ಲಿ ನೀರಾವರಿ ಸೌಲಭ್ಯವಿಲ್ಲ. ವಾಟೆ ಹೊಳೆ ಜಲಾಶಯದಿಂದ 18 ಸಾವಿರ ಎಕರೆಗೆ ನೀರಾವರಿ ಸೌಲಭ್ಯ ನೀಡ ಬಹುದು. ಕೇವಲ 5 ಸಾವಿರ ಎಕರೆಗೆ ನೀರು ಲಭ್ಯವಿದೆ. ನಾಲೆ ದುರಸ್ತಿ ಮಾಡದ ಕಾರಣ ಎರಡು ಬೆಳೆ ಬೆಳೆಯಲು ಸಾಧ್ಯವಾ ಗುತ್ತಿಲ್ಲ. ಯಗಚಿ ನೀರು ಶೇ.50ರಷ್ಟು ವ್ಯರ್ಥವಾಗುತ್ತಿದೆ. ಆದ್ದರಿಂದ ಸರ್ಕಾರ ನಮ್ಮಲ್ಲಿರುವ ನೀರಾವರಿ ಸೌಲಭ್ಯ ಬಳಸಿ ಕೊಳ್ಳಲು ಕಾಲುವೆಗಳನ್ನು ದುರಸ್ತಿ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಹೇಮಾವತಿ ಜಲಾಶಯ ನಿರ್ಮಾಣದಿಂದ ಗೊರೂರು, ಕಟ್ಟಾಯ ಭಾಗದ ಹಲವು ಪ್ರದೇಶಗಳು ಶೀತಪೀಡಿತವಾಗಿದೆ. ಮನೆಯೊಳಗೆ ನೀರು ಬರುತ್ತದೆ. ನಿರಾಶ್ರಿತರಿಗೆ ಇದುವರೆಗೂ ಮೂಲಸೌಯರ್ಕಗಳಿಲ್ಲ. ಭೂಸಂತ್ರಸ್ತರಿಗೆ ಇದುವರೆಗೂ ಪರಿಹಾರ ದೊರೆತಿಲ್ಲ, ಕೂಡಲೇ ಪರಿಹಾರ ನೀಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡುತ್ತೇನೆ. 5 ಎಕರೆ ಒಳಗೆ ಇರುವ ಕಾಫಿ ಬೆಳೆಗಾರರನ್ನು ಸಣ್ಣ ಬೆಳೆಗಾರರೆಂದು ಪರಿಗಣಿಸಿ ಪರಿಹಾರ ಒದಗಿಸಬೇಕು. ಗಾಳಿಮಳೆಗೆ ಮನೆಗಳು ಬಿದ್ದು ಎರಡು ತಿಂಗಳು ಕಳೆಯುತ್ತಾ ಬಂದರೂ ಇದುವರೆಗೂ ಪರಿಹಾರ ನೀಡಿಲ್ಲವೆಂದರೆ ಮನೆ ಕಳೆದುಕೊಂಡವರು ಎಲ್ಲಿಗೆ ಹೋಗಬೇಕು. ಏಕೆ ಸರ್ಕಾರ ಬಳಿ ಹಣವಿಲ್ಲವೇ ಎಂದು ಪ್ರಶ್ನಿಸಿದ ಅವರು, ನಮ್ಮ ಕ್ಷೇತ್ರದಲ್ಲಿ ಆಗಿರುವ ಬೆಳೆಹಾನಿ ಬಗ್ಗೆ ತುರ್ತಾಗಿ ಸಮೀಕ್ಷೆ ನಡೆಸಿ ಪರಿಹಾರ ನೀಡಬೇಕು. ದುಸ್ಥಿತಿಯಲ್ಲಿರುವ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಬೇಕೆಂದು ಸದನದಲ್ಲಿ ಆಗ್ರಹಿಸಿದರು.

## ಹೆಚ್‌ಡಿಸಿಸಿ ಬ್ಯಾಂಕ್ 13 ಸ್ಥಾನವೂ ಜೆಡಿಎಸ್ ತೆಕ್ಕೆಗೆ

### ಗಿರೀಶ್ ಚನ್ನವೀರಪ್ಪಗೆ ಗೆಲುವು: 12 ನಿರ್ದೇಶಕರು ಅವಿರೋಧ ಆಯ್ಕೆ

• ಪ್ರಜೋದಯ ವರದಿ

**ಹಾಸನ:** ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಹೆಚ್‌ಡಿಸಿಸಿ) ಆಡಳಿತ ಮಂಡಳಿಯ 13 ನಿರ್ದೇಶಕ ಸ್ಥಾನಗಳನ್ನೂ ಜೆಡಿಎಸ್ ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ ಪ್ರಾಬಲ್ಯ ಹೆಚ್ಚಿಸಿಕೊಂಡಿದೆ.



13 ಸ್ಥಾನಗಳ ಪೈಕಿ ಜೆಡಿಎಸ್ ಬೆಂಬಲಿತ 12 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದರು. ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳು ಹಾಗು ಪಟ್ಟಣ ಸಹಕಾರ ಬ್ಯಾಂಕುಗಳ ಕ್ಷೇತ್ರಕ್ಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಗಿರೀಶ್ ಚನ್ನವೀರಪ್ಪ ಹಾಗು ಕಾಂಗ್ರೆಸ್ ಬೆಂಬಲಿತ ಚನ್ನರಾಯಪಟ್ಟಣ ತಾಲ್ಲೂಕಿನ ಮಟ್ಟನವಿಲೆ ರುದ್ರೇಶ್ ನಡುವೆ ಸ್ಪರ್ಧೆ ಏರ್ಪಟ್ಟಿದ್ದರಿಂದ ಒಂದು ಕ್ಷೇತ್ರಕ್ಕೆ ಮಾತ್ರ ಗುರುವಾರ ಚುನಾವಣೆ ನಡೆಯಿತು.

45 ಮತಗಳ ಪೈಕಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಗಿರೀಶ್ ಚನ್ನವೀರಪ್ಪ ಅವರು 37 ಮತಗಳನ್ನು ಪಡೆದುಕೊಳ್ಳುವ ಮೂಲಕ ಭರ್ಜರಿ ಗೆಲುವು ಸಾಧಿಸಿದ್ದಾರೆ. ಪ್ರತಿಸ್ಪರ್ಧಿ ರುದ್ರೇಶ್ ಅವರು ಕೇವಲ 8 ಮತಗಳನ್ನು ಪಡೆದುಕೊಂಡು ಪರಾಭವಗೊಂಡರು.

**ಅವಿರೋಧವಾಗಿ ಆಯ್ಕೆಯಾದವರು**

ಚನ್ನರಾಯಪಟ್ಟಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಶ್ರವಣಬೆಳಗೊಳ ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ, ಹೊಳೆನರಸೀಪುರ ತಾಲ್ಲೂಕಿನಿಂದ ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಹಾಲು ಉತ್ಪಾದಕರ ಸಹಕಾರ ಸಂಘದಿಂದ ಬ್ಯಾಂಕಿನ ಹಾಲಿ ಅಧ್ಯಕ್ಷ, ಸೋಮನಹಳ್ಳಿ ನಾಗರಾಜು, ಅರಕಲಗೂಡು ತಾಲ್ಲೂಕಿನಿಂದ ಮಾಜಿ ಅಧ್ಯಕ್ಷ ಹೊನ್ನವಳ್ಳಿ ಸತೀಶ್, ಬೇಲೂರು ತಾಲ್ಲೂಕಿನಿಂದ ಮಾಜಿ ಉಪಾಧ್ಯಕ್ಷ ಹಾಲಿ, ನಿರ್ದೇಶಕ ಎಂ.ಎನ್.ನಾಗರಾಜು, ಆಲೂರು-ಸಕಲೇಶಪುರ ತಾಲ್ಲೂಕು ಕ್ಷೇತ್ರದಿಂದ ಕಬ್ಬಿನಹಳ್ಳಿ ಜಗದೀಶ್, ಸಗಟು ಮಾರಾಟ ಮಳಿಗೆಗಳು ಹಾಗು ಇತರೆ ಸಹಕಾರ ಸಂಘಗಳ ಕ್ಷೇತ್ರದಿಂದ ಹಾಲಿ ನಿರ್ದೇಶಕ ಬಿದರಿಕೆರೆ ಜಯರಾಮ್, ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ ಕ್ಷೇತ್ರದಿಂದ ಹೆಚ್.ಎನ್.ದೇವೇಗೌಡ (ಪಾಪಣ್ಣಿ) ಅವರು ಪುನರಾಯ್ಕೆ ಯಾಗಿದ್ದಾರೆ.

ಉಳಿದಂತೆ ಹಾಸನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಹನುಮೇಗೌಡ, ಅರಸೀಕೆರೆ ತಾಲ್ಲೂಕಿನಿಂದ ಶೇಖರಪ್ಪ, ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ಕೆ.ಎಸ್.ಮಂಜೇಗೌಡ, ಗಂಡಸಿ ಗಂಗಾಧರ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಅಧಿವೇಶನದಲ್ಲಿ ಜಿಲ್ಲೆಯ ಸಮಸ್ಯೆಗಳ ಧ್ವನಿ ಎತ್ತಿದ ಶಾಸಕರು

### ಶಿವಲಿಂಗೇಗೌಡ, ಸಿಮೆಂಟ್ ಮಂಜು, ಸುರೇಶ್, ಎ.ಮಂಜು, ಸ್ವರೂಪ್ ಹಲವು ವಿಷಯ ಪ್ರಸ್ತಾಪ

• ಪ್ರಜೋದಯ ವರದಿ

**ಹಾಸನ:** ವಿಧಾನಸಭೆ ಅಧಿವೇಶನದಲ್ಲಿ ಜಿಲ್ಲೆಯ ಶಾಸಕರು ಗುರುವಾರ ವಿವಿಧ ವಿಷಯಗಳ ಕುರಿತು ಧ್ವನಿ ಎತ್ತಿ, ಸಮಸ್ಯೆಗಳನ್ನು ಅನಾವರಣಗೊಳಿಸುವ ಜೊತೆಗೆ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ನೀಡುವಂತೆ ಗಟ್ಟಿಧ್ವನಿಯಲ್ಲಿ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು, ಕುರಿಗಾಹಿಗಳ ಸಮಸ್ಯೆ ಪ್ರಸ್ತಾಪಿಸುವ ಜೊತೆಗೆ, ಕೇಂದ್ರ ಸರ್ಕಾರ ಅನುದಾನ ಹಂಚಿಕೆ, ಜಿಎಸ್‌ಟಿಯಲ್ಲಿ ತಾರತಮ್ಯ ವಿಚಾರದಲ್ಲಿ ಮಲತಾಯಿ ಧೋರಣೆ ತೋರುತ್ತಿರುವ ಬಗ್ಗೆ ಸದನದ ಗಮನ ಸೆಳೆದರು.



ಬಿಜೆಪಿ ಶಾಸಕ ಸಿಮೆಂಟ್ ಮಂಜು ಅವರು ಮಳೆಹಾನಿ, ಮಲೆನಾಡು ಅಭಿವೃದ್ಧಿ ಪ್ರಾಧಿಕಾರಕ್ಕೆ ಕೇವಲ 35 ಲಕ್ಷ ನೀಡುತ್ತಿದ್ದು ಈ ಕುರಿತು ಸರ್ಕಾರ ಗಮನ ಹರಿಸಿ 35 ಕೋಟಿ ರೂ. ನೀಡಬೇಕೆಂದು ಒತ್ತಾಯಿಸಿದರು. ಮತ್ತೊಬ್ಬ ಬಿಜೆಪಿ ಶಾಸಕ ಹೆಚ್.ಕೆ.ಸುರೇಶ್ ಅವರು, ಬೇಲೂರು - ಹಳೇಬೀಡು ವಿಶ್ವ ಪಾರಂಪರಿಕ ತಾಣ ನಿರ್ವಹಣಾ ಪ್ರಾಧಿಕಾರ ಖಾಸಗಿ ವಿಧೇಯಕವನ್ನು ಅಂಗೀಕರಿಸಿ, ಶೀಘ್ರವೇ ಪ್ರಾಧಿಕಾರ ರಚಿಸುವ ಬಗ್ಗೆ ಸರ್ಕಾರದ ಗಮನ ಸೆಳೆದರು.

ಜೆಡಿಎಸ್ ಶಾಸಕ ಎ.ಮಂಜು ಅವರು, ಕೊಣನೂರು-ಕಟ್ಟೇಪುರ ನಡುವೆ ಸೇತುವೆ ನಿರ್ಮಾಣಕ್ಕೆ ಒತ್ತಾಯಿಸಿದರು. ಹೆಚ್.ಪಿ.ಸ್ವರೂಪ್ ಅವರು, ಹಾಸನ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸಿರುವ ಸರ್ಕಾರ ಅದಕ್ಕೆ ಅನುಗುಣವಾಗಿ ಅನುದಾನ ನೀಡದೆ ವಂಚನೆ ಮಾಡಿದೆ ಎಂದು ಆರೋಪಿಸಿ, ಹೆಚ್ಚುವರಿ ಅನುದಾನ ಬಿಡುಗಡೆಗೆ ಒತ್ತಾಯಿಸಿದರು.

**ಕೇಂದ್ರ ಸರ್ಕಾರ ಶ್ವೇತಪತ್ರ ಹೊರಡಿಸಲಿ**

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ನಾವು ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನಪ್ರತಿನಿಧಿಗಳು ಒಟ್ಟಿಗೆ ಕೆಲಸ ಮಾಡಬೇಕಿದೆ. ಕೇಂದ್ರ ಸರ್ಕಾರದ ಯೋಜನೆ ಜಾರಿಗೊಳಿಸಲು ಇರುವ ನ್ಯೂನತೆಗಳ ಬಗ್ಗೆ ಜನರಿಗೆ ತಿಳಿಸಬೇಕಿದೆ. ಪ್ರತಿಪಕ್ಷದ ಶಾಸಕರು ಕೇಂದ್ರ ಸರ್ಕಾರದ ತಪ್ಪುಗಳನ್ನು ಮುಚ್ಚಿಕೊಂಡು ರಾಜ್ಯ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದ್ದಾರೆಂದು ತರಾಟೆಗೆ ತೆಗೆದುಕೊಂಡರು.

ಹಣಕಾಸು ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ತೋರುತ್ತಿದೆ. ಅದರಿಂದ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಅಡ್ಡಿಯುಂಟಾಗಿದೆ. ಆದ್ದರಿಂದ ಕೇಂದ್ರ ಸರ್ಕಾರ ರಾಜ್ಯಕ್ಕೆ ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಶ್ವೇತಪತ್ರ ಹೊರಡಿಸಲಿ. ರಾಜ್ಯ ಸರ್ಕಾರದ ಬಗ್ಗೆ ಜನರಿಗೆ ತಪ್ಪು ಸಂದೇಶ ಹೋಗುವುದನ್ನು ತಡೆಯಲು, ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯದ ಪಾಲು ಎಷ್ಟು, ಕೇಂದ್ರದ ಪಾಲು ಎಷ್ಟು ಎಂಬುದು ಜನರಿಗೆ ತಿಳಿಸಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.

ಒಂದು ದೇಶ ಒಂದು ತೆರಿಗೆ ಎಂದು ಜಿಎಸ್‌ಟಿ ಜಾರಿಗೆ ತಂದು ರಾಜ್ಯದ ತೆರಿಗೆ ಪಾಲಿನಲ್ಲಿ ಕೇಂದ್ರ ಸರ್ಕಾರ ವಂಚನೆ ಮಾಡಿದೆ. ಶೇ.50ರಷ್ಟು ಜಿಎಸ್‌ಟಿ ಪಾಲು ಕೇಂದ್ರಕ್ಕೆ ಹೋಗುತ್ತಿದೆ. ನಾವು ಹೆಚ್ಚು ತೆರಿಗೆ ಕಟ್ಟಿದರೂ ನಮ್ಮ ಪಾಲು ನಮಗೆ ಬರುತ್ತಿಲ್ಲ. ಈ ಬಗ್ಗೆ ನಾವು ಒಟ್ಟಾಗಿ ಹೋರಾಟ ಮಾಡಬೇಕಿದೆ ಎಂದು ಹೇಳಿದರು.

ಈ ವೇಳೆ ಉತ್ತರ ಕರ್ನಾಟಕ ಕಡೆಯಿಂದ ಬರುವ ಮತ್ತು ಅರಸೀಕೆರೆ ಭಾಗದ ಕುರಿಗಾಹಿಗಳ ನಡುವೆ ಸರ್ಕಾರದಿಂದ ಆಗುತ್ತಿರುವ ತಾರತಮ್ಯವನ್ನು ಸದನದ ಗಮನಕ್ಕೆ ತಂದರು. ಉತ್ತರದಿಂದ ಬರುವ ಕುರಿಗಾಹಿಗಳಿಗೆ ಸಿಗುತ್ತಿರುವ ಸೌಲಭ್ಯ ಸ್ಥಳೀಯರಿಗೆ ಸಿಗುತ್ತಿಲ್ಲ, ಅವರು ಬೇಸಿಗೆ ಯಲ್ಲಿ ಮಾತ್ರ ಹುಲ್ಲುಗಾವಲು ಪ್ರದೇಶಗಳನ್ನು ಹುಡುಕಿಕೊಂಡು ದಕ್ಷಿಣ ಕರ್ನಾಟಕದ ಕಡೆ ಬರುತ್ತಾರೆ, ಅರಸೀಕೆರೆ ಭಾಗದ ಕುರಿಗಾಹಿಗಳು ಸಹ ಚನ್ನರಾಯಪಟ್ಟಣದ ಕಡೆ ಗದ್ದೆ ಮತ್ತು ಹುಲ್ಲುಗಾವಲುಗಳನ್ನು ಹುಡುಕಿಕೊಂಡು ವಲಸೆ ಹೋಗುತ್ತಾರೆ. ಹೀಗಾಗಿ ಉತ್ತರದ ಕುರಿಗಾಹಿ ಗಳಿಗೆ ಸಿಗುವ ಸೌಲಭ್ಯ ಸವಲತ್ತುಗಳು ತಮ್ಮ ಭಾಗದವರಿಗೂ ಸಿಗಬೇಕೆಂದು ಒತ್ತಾಯಿಸಿದರು.

ಅರಣ್ಯ ಇಲಾಖೆ ಎಲ್ಲಾ ಕಾಡನ್ನು ಡೀಮ್ಡ್ ಫಾರೆಸ್ಟ್ ಎಂದು ಮಾಡಿ, ಕುರಿಗಾಹಿಗಳಿಗೆ ತೊಂದರೆ ನೀಡಲಾಗುತ್ತಿದೆ. ಕಾಡಿನಲ್ಲಿ ಜಾನುವಾರುಗಳು ಮೇಯಿಸಲು ಅವಕಾಶ ನೀಡಬೇಕು. ಈ ಬಗ್ಗೆ ಕಾನೂನು ರೂಪಿಸಬೇಕೆಂದು ಮನವಿ ಮಾಡಿದರು.

## ಕಾಲು ಜಾರಿ ನಾಲೆಗೆ ಬಿದ್ದು ಮಹಿಳೆ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೆಸರು ಮೆತ್ತಿದ್ದ ಕಾಲು ತೊಳೆಯಲೆಂದು ನಾಲೆಗೆ ಇಳಿದಿದ್ದ ಮಹಿಳೆ ಕಾಲು ಜಾರಿ ಬಿದ್ದು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಲ್ಲವನಘಟ್ಟ ಸಮೀಪ ನಡೆದಿದೆ.



ಪಟ್ಟಣದ ಗಾಯತ್ರಿ ಬಡಾವಣೆ ನಿವಾಸಿ ಎಸ್.ಟಿ.ಸಾವಿತ್ರಮ್ಮ(50) ಮೃತರು. ಎಲ್‌ಐಸಿ ಏಜೆಂಟರಾಗಿದ್ದ ಸಾವಿತ್ರಮ್ಮ ಬುಧವಾರ ಬೆಳಿಗ್ಗೆ ಗೌಡಗೆರೆ ಹೊಸೂರು ಗ್ರಾಮಕ್ಕೆ ತಮ್ಮ ದ್ವಿಚಕ್ರ ವಾಹನದಲ್ಲಿ ಕಾರ್ಯನಿಮಿತ್ತ ತೆರಳಿದ್ದರು. ಕೆಲಸ ಮುಗಿಸಿ ವಾಪಾಸ್ ಬರುತ್ತಿದ್ದಾಗ ಕಾಲಿಗೆ ಕೆಸರು ಮೆತ್ತಿಕೊಂಡಿದ್ದು ಅದನ್ನು ತೊಳೆದುಕೊಳ್ಳಲೆಂದು ಮಲ್ಲವ್ವನಘಟ್ಟ ಬಳಿ ಗಾಡಿ ನಿಲ್ಲಿಸಿ ನಾಲೆಯ ತಿರುವಿನ ಸಿಮೆಂಟ್ ಇಳಿಜಾರಿಗೆ ತೆರಳಿದ್ದರು.


ಕಾಲು ಜಾರಿ ನೀರಿಗೆ ಬಿದ್ದಿದ್ದರು. ಪತಿ ನಾಗರಾಜ್ ಹಾಗು ಸಂಬಂಧಿಕರು ಹುಡುಕಾಟಕ್ಕಾಗಿ ಹೊಸೂರು ಕಡೆಗೆ ತೆರಳುತ್ತಿದ್ದ ವೇಳೆ ನಾಲೆ ಬಳಿ ದ್ವಿಚಕ್ರ ವಾಹನ ಕಂಡಿದೆ. ನಾಲೆ ಯ ಬಳಿ ಚಪ್ಪಲಿ ಸಿಕ್ಕಿವೆ.

ಗುರುವಾರ ಮಧ್ಯಾಹ್ನ 3 ಗಂಟೆಗೆ ಡಿಂಕ ಗ್ರಾಮದ ಬಳಿ ಮೃತದೇಹ ಪತ್ತೆಯಾಗಿದ್ದು ಶ್ರವಣಬೆಳಗೊಳ ಸಾರ್ವಜನಿಕ ಆಸ್ಪತ್ರೆ ಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾ ಯಿತು. ತುಮಕೂರು ಜಿಲ್ಲೆ ಹೆಬ್ಬೂರು ಹೋಬಳಿ ಗೋವಿಂದರಾಜಪುರ ಗ್ರಾಮದಲ್ಲಿ ಶುಕ್ರವಾರ ಅಂತ್ಯಕ್ರಿಯೆ ನೆರವೇರಲಿದೆ. ಮೃತರಿಗೆ ಪತಿ ಹಾಗು ಇಬ್ಬರು ಹೆಣ್ಣು ಮಕ್ಕಳಿ ದ್ದಾರೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಾಲಭಾದೆಗೆ ಹೆದರಿ ನೇಣಿಗೆ ಶರಣಾದ ರೈತ

• ಪ್ರಜೋದಯ ವರದಿ

**ಅರಕಲಗೂಡು:** ಸಾಲಭಾದೆ ತಾಳಲಾರದೆ ರೈತ ನೇಣಿಗೆ ಶರಣಾಗಿರುವ ಘಟನೆ ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿ ನೆಲಬಳ್ಳಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ತಿಮ್ಮೇಗೌಡ ತಮ್ಮ ಜಮೀನಿನ ಮರದಲ್ಲಿ ನೇಣು ಬಿಗಿದುಕೊಂಡಿದ್ದಾರೆ. ಬೆಳಿಗ್ಗೆ ಉಪಹಾರದ ಬಳಿಕ ಜಮೀನಿಗೆ ಹೋಗಿ ಬರುವುದಾಗಿ ಹೇಳಿ ತೆರಳಿದ್ದರು. ಮಧ್ಯಾಹ್ನ ಊಟಕ್ಕೆ ಬರದೇ ಇದ್ದ ಕಾರಣ ಜಮೀನು ಬಳಿ ಕುಟುಂಬಸ್ಥರು ತೆರಳಿದಾಗ ಮರದಲ್ಲಿ ನೇತಾಡುತ್ತಿರುವುದು ಕಂಡಿದೆ.

ರೈತನಿಗೆ ನಾಲ್ಕು ಎಕರೆ ಜಮೀನು ಇದ್ದು, ಶುಂಠಿ ಮತ್ತು ಜೋಳ, ಕಾಫಿ, ಮೆಣಸು ಮಿಶ್ರ ಬೆಳೆ ಮಾಡಿಕೊಂಡಿದ್ದರು. ಮಲ್ಲಿಪಟ್ಟಣ ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ನಲ್ಲಿ 1 ಲಕ್ಷ ರೂ., 4 ಲಕ್ಷ ರೂ. ಮೌಲ್ಯದ ಒಡವೆಗಳನ್ನು ಬ್ಯಾಂಕ್‌ನಲ್ಲಿ ಅಡ ಮಾನ ಸಾಲ ಮತ್ತು ಒಂದು ಲಕ್ಷ ರೂ ಕೈ ಸಾಲ ಮಾಡಿಕೊಂಡಿದ್ದರು ಎನ್ನಲಾಗಿದೆ.

ಅತಿಯಾದ ಮಳೆಯಿಂದ ಎಲ್ಲಾ ಬೆಳೆಗಳು ಹಾನಿಯಾಗಿದ್ದು, ಸಾಲಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಹಶೀಲ್ದಾರ್ ಕೆ.ಸಿ. ಸೌಮ್ಯ ಮತ್ತು ಗ್ರೇಡ್ -2 ತಹ ಶೀಲ್ದಾರ್ ಸ್ವಾಮಿ, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ಕವಿತಾ ಅವರು ಭೇಟಿ ನೀಡಿ ಕುಟುಂಬ ಸ್ಥರಿಗೆ ಸಾಂತ್ವನ ಹೇಳಿದರು. ತಾಲ್ಲೂಕು ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

## ಕಾಡಾನೆ ದಾಳಿಗೆ ಮೆಕ್ಕೆಜೋಳ, ಅಡಿಕೆ ಬೆಳೆ ನಾಶ

**ಆಲೂರು:** ಕಾಡಾನೆ ದಾಳಿಯಿಂದ ಅಪಾರ ಪ್ರಮಾಣದ ಮೆಕ್ಕೆಜೋಳ ಹಾಗು ಅಡಿಕೆ ಬೆಳೆ ನಾಶವಾಗಿರುವ ಘಟನೆ ತಾಲ್ಲೂಕಿನ ಮಲ್ಲೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಭವಾನಿ ಎಂಬುವವರ ಜಮೀನಿಗೆ ಗುರು ವಾರ ಬೆಳಿಗ್ಗೆ ಲಗ್ಗೆಯಿಟ್ಟಿರುವ ಕಾಡಾನೆಗಳು ಜೋಳ ಹಾಗು ಪಕ್ಕದ ಜಮೀನಿನಲ್ಲಿ ಬೆಳೆದಿದ್ದ ಅಡಿಕೆ ಗಿಡಗಳನ್ನು ತುಳಿದು ನಾಶಪಡಿಸಿವೆ. ಉತ್ತಮ ಮಳೆ ಹಾಗು ನಿರ್ವಹಣೆಯಿಂದ ಮೆಕ್ಕೆಜೋಳ ಫಸಲು ಚೆನ್ನಾಗಿ ಬಂದಿತ್ತು. ಅಧಿಕ ಆದಾ ಯದ ನಿರೀಕ್ಷೆಯಲ್ಲಿದ್ದ ರೈತರು ಈಗ ಕಣ್ಣೀರಿನಲ್ಲಿ ಕೈ ತೊಳೆಯುವಂತಾಗಿದೆ. ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು ಅವುಗಳನ್ನು ಸ್ಥಳಾಂತರಿಸಬೇಕೆಂಬ ಕೂಗು ಹಲವು ವರ್ಷಗಳಿಂದ ಕೇಳಿಬರುತ್ತಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಹಾಗು ಜನಪ್ರತಿ ನಿಧಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಇನ್ನಾದರೂ ಆನೆಗಳ ಹಾವಳಿ ತಡೆಗೆ ಕಠಿಣ ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ ನಡೆಸುವುದಾಗಿ ರಕ್ಷಣಾ ವೇದಿಕೆ ಪದಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

## ಅಮಿತ್ ಶಾ ಭೇಟಿ ಮಾಡಿದ ಹೆಚ್.ಡಿ.ಕೆ.

• ಪ್ರಜೋದಯ ವರದಿ

**ನವದೆಹಲಿ:** ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಜೆಡಿಎಸ್ ನಾಯಕ ಹಾಗು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಗುರುವಾರ ಭೇಟಿ ಮಾಡಿದ್ದಾರೆ.



ಅಮಿತ್ ಶಾ ಅವರ ಸಂಸತ್ ಕಚೇರಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿರುವುದಾಗಿ ಕುಮಾರಸ್ವಾಮಿ ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

ರಾಜ್ಯ ಮತ್ತು ರಾಷ್ಟ್ರಕ್ಕೆ ಸಂಬಂಧಿಸಿದ ಮಹತ್ವದ ವಿಷಯಗಳು ಸೇರಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಅಭಿವೃದ್ಧಿಗಳ ಬಗ್ಗೆ ಚರ್ಚೆ ಮಾಡಲಾ ಯಿತು ಎಂದು ಕುಮಾರಸ್ವಾಮಿ ಹೇಳಿದ್ದಾರೆ. ದೇಶ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದು ಈ ವೇಳೆ ಅಮಿತ್ ಶಾ ಅವರ ಮಾರ್ಗದರ್ಶನ ಮತ್ತು ಬೆಂಬಲವು ಅತ್ಯಂತ ಮೌಲ್ಯಯುತ ವಾಗಿದೆ ಯೆಂದು ಕುಮಾರಸ್ವಾಮಿ ಹೇಳಿದ್ದಾರೆ.

## ಬೇರೆ ಪಕ್ಷದವರಿಗೂ ಸಿಎಂ ಸಹಾಯ: ಬಿ.ಆರ್. ಪಾಟೀಲ್

• ಪ್ರಜೋದಯ ವರದಿ

**ಸಕಲೇಶಪುರ:** ಬೇರೆ ಪಕ್ಷದ ಶಾಸಕರಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಆಗುವುದು ಸಾಮಾನ್ಯ. ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಿನ ದಿನಗಳಲ್ಲಿ ಅವರಿಗೂ ಸಹಾಯ ಮಾಡುತ್ತಾರೆ, ಅವರು ಸಣ್ಣ ಮನಸ್ಸಿನವರಲ್ಲವೆಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಅವರು ಹೇಳಿದರು.



> **ಧರ್ಮಸ್ಥಳ ವಿಚಾರವಾಗಿ ನಾವು ಏನೇ ಪ್ರತಿಕ್ರಿಯೆ ಕೊಟ್ಟರೂ ತಪ್ಪಾಗುತ್ತದೆ. ಎಸ್‌ಐಟಿ ತನಿಖೆ ಮಾಡುತ್ತಿರುವಾಗ ಹೇಳಿಕೆ ನೀಡಬಾರದು. ನಿಷ್ಪಕ್ಷಪಾತ ತನಿಖೆ ನಡೆಯಬೇಕೆಂಬುದಷ್ಟೇ ನಮ್ಮ ಆಶಯ.**
> **-ಬಿ.ಆರ್. ಪಾಟೀಲ್, ಶಾಸಕ**

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿ, ಅನುದಾನ ಕೊರತೆಯಿಂದ ಶಾಸಕರು ಕಷ್ಟದ ಲ್ಲಿರುವುದು ನಿಜ. ಕಾಂಗ್ರೆಸ್ ಶಾಸಕರಿಗೆ 50 ಕೋಟಿ ರೂ. ಹಣ ನೀಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದಾರೆ. ಬಡವರ ಹೊಟ್ಟೆಗೆ ಅನ್ನ ಹಾಕುವುದು ಅಭಿವೃದ್ಧಿ ಕೆಲಸವೇ ಆಗಿದೆ. ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿರುವುದರಿಂದ ಹಣಕಾಸಿನ ತೊಂದರೆ ಆಗಿದೆ. ಅದು ಕೂಡ ಅಭಿವೃದ್ಧಿಯ ಭಾಗವೆಂದು ಗ್ಯಾರಂಟಿ ಯೋಜನೆಗಳನ್ನು ಸಮರ್ಥಿಸಿಕೊಂಡರು.

ತಮ್ಮದೇ ಪಕ್ಷ ಅಧಿಕಾರದಲ್ಲಿದ್ದರೆ ಶಾಸಕರಿಗೆ ಹೆಚ್ಚಿನ ಅನುದಾನ ದೊರೆಯುತ್ತದೆ. ಬೇರೆ ಪಕ್ಷ ಇದ್ದಾಗ ತಾರತಮ್ಯವಾಗುತ್ತದೆ. ಮುಖ್ಯಮಂತ್ರಿ ಅವರು ಮುಂದಿನ ದಿನಗಳಲ್ಲಿ ಬೇರೆ ಪಕ್ಷದ ಶಾಸಕರಿಗೂ ಸಹಾಯ ಮಾಡುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

### 3 ಕೋಟಿ ರೂ. ವೆಚ್ಚದ ಕ್ರಿಯಾ ಯೋಜನೆ | ಬೆಳೆ ಉಳಿಸಿಕೊಳ್ಳಲು ಕೀಟಗಳಿಗೆ ಮೊರೆ

## ಪ್ಯಾರಾಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಕ್ಕೆ ಬೇಡಿಕೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿರುವ ತೆಂಗಿಗೆ ತಗುಲುತ್ತಿರುವ ಕಪ್ಪು ತಲೆ ಹುಳು ಸೇರಿ ವಿವಿಧ ರೋಗಬಾಧೆಯಿಂದ ಮರಗಳನ್ನು ರಕ್ಷಿಸಿಕೊಳ್ಳಲು ಜಿಲ್ಲೆಯ ಅರಸೀಕೆರೆ ಹಾಗು ಹೊಳೆನರಸೀಪುರದಲ್ಲಿ ಪ್ಯಾರಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಗಳ ಉನ್ನತೀಕರಣಕ್ಕೆ ತೋಟ ಗಾರಿಕೆ ಇಲಾಖೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಈ ಬಾರಿ ತೆಂಗಿಗೆ ಅತ್ಯಧಿಕ ಬೆಲೆ ನಿಗದಿಯಾಗಿದೆಯಾದರೂ ವಿವಿಧ ರೋಗಗಳ ಹಾವಳಿಯಿಂದ ಬೆಳೆ ಗಾರರು ಕಂಗಾಲಾಗಿದ್ದಾರೆ. ದತ್ತಾಂಶದ ಪ್ರಕಾರ ಅರಸೀಕೆರೆ ಹಾಗು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 1.18 ಲಕ್ಷ ಹೆಕ್ಟೇರ್‌ಗಿಂತ ಹೆಚ್ಚು ಪ್ರದೇಶದ ತೆಂಗು ಕೀಟ ಮತ್ತು ರೋಗ ಬಾಧೆಗೆ ತುತ್ತಾಗಿದೆ. ರುಗೋಸ್ ಬಿಳಿ ನೊಣ ಬಾಧೆಯಿಂದ 82 ಸಾವಿರ ಹೆಕ್ಟೇರ್, ಕಪ್ಪು ತಲೆ ಹುಳುಗಳು ಹರಡಿ 10 ಸಾವಿರ ಹೆಕ್ಟೇರ್, ಕಾಂಡ ಸೋರುವಿಕೆಯಿಂದ 15 ಸಾವಿರ ಹೆಕ್ಟೇರ್‌ನಲ್ಲಿ ಬೆಳೆದಿದ್ದ ತೆಂಗು ನೆಲಕಚ್ಚಿದೆ. ಅದರಿಂದ ತೆಂಗು ಬೆಳೆಯನ್ನೇ ನಂಬಿದ್ದ ಸಾವಿರಾರು ಬೆಳೆಗಾರರು ಆರ್ಥಿಕ ನಷ್ಟಕ್ಕೆ ಸಿಲುಕಿದ್ದಾರೆ. ಈ ಸಮಸ್ಯೆಯಿಂದ ಶಾಶ್ವತ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಪ್ರಸ್ತಾವನೆಯಲ್ಲಿ ಮನವಿ ಮಾಡಿಕೊಳ್ಳಲಾಗಿದೆ.



**ಪ್ಯಾರಾಸಿಟಾಯ್ಡ್ ಎಂದರೇನು**

ಪ್ಯಾರಸಿಟಾಯ್ಡ್ ಎಂದರೆ ಒಂದು ವಿಶೇಷ ರೀತಿಯ ಜೀವಿ (ಸಾಮಾನ್ಯವಾಗಿ ಕೀಟ) ಇದು ತನ್ನ ಜೀವನ ಚಕ್ರದಲ್ಲಿ ಮತ್ತೊಂದು ಜೀವಿಯ (ಆತಿಥೇಯ) ದೇಹವನ್ನು ಬಳಸಿಕೊಂಡು ಬೆಳೆದರೂ, ಕೊನೆಗೆ ಆತಿಥೇಯನನ್ನು ಕೊಂದು ಹಾಕುತ್ತದೆ. ಇವು ಸಾಮಾನ್ಯ ಪರೋಪ ಜೀವಿಗಳಿಗಿಂತ ಭಿನ್ನ. ಪರೋಪ ಜೀವಿಗಳು ಆತಿಥೇಯನನ್ನು ಕೊಲ್ಲದೇ ದೀರ್ಘಕಾಲ ಬದುಕುತ್ತವೆ. ಆದರೆ ಪ್ಯಾರಸಿಟಾಯ್ಡ್ ಗಳು ಆತಿಥೇಯನನ್ನು ಕೊನೆಗೆ ನಾಶಮಾಡುತ್ತವೆ. ತೆಂಗು ಬೆಳೆಗೆ ತಗುಲುವ ಕಪ್ಪುತಲೆ ಹುಳು ಸೇರಿ ವಿವಿಧ ಕೀಟಗಳನ್ನು ನಾಶಮಾಡಬಲ್ಲ ಸಾಮರ್ಥ್ಯ ಪ್ಯಾರಾಸಿಟಾಯ್ಡ್‌ಗೆ ಇದ್ದು ಅದು ಮರ ರಕ್ಷಣೆಗೆ ನೆರವಾಗುತ್ತದೆ.

> **ಅರಸೀಕೆರೆ ಹಾಗು ಹೊಳೆನರಸೀಪುರದಲ್ಲಿ ಪ್ಯಾರಾಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಗಳ ವಿಸ್ತರಿಸುವಂತೆ 3 ಕೋಟಿ ರೂ. ವೆಚ್ಚದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಜನಪ್ರತಿನಿಧಿಗಳು ಸಂಬಂಧಪಟ್ಟ ಅಧಿಕಾರಿ ಹಾಗು ಸಚಿವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.**
> **-ಯೋಗೇಶ್,** ತೋಟಗಾರಿಕೆ ಇಲಾಖೆ ಉಪನಿರ್ದೇಶಕ

**3 ಕೋಟಿ ರೂ. ವೆಚ್ಚದ ಯೋಜನೆ**

ಅರಸೀಕೆರೆ ಹಾಗು ಹೊಳೆನರಸೀಪುರದಲ್ಲಿ ಪ್ಯಾರಾಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಗಳಿದ್ದು ಎರಡೂ ಕೇಂದ್ರಗಳಿಂದ ವಾರ್ಷಿಕ ಕೇವಲ 25 ಲಕ್ಷ ಪ್ಯಾರಾಸಿಟಾಯ್ಡ್ ಕೀಟಗಳ ಉತ್ಪಾದನೆ ಸಾಧ್ಯ ವಾಗುತ್ತಿದೆ. ಆದರೆ ಪ್ರಸ್ತುತ 1.50 ಕೋಟಿಯಷ್ಟು ಪ್ಯಾರಾಸಿಟಾಯ್ಡ್‌ಗಳ ಅವಶ್ಯಕತೆಯಿದ್ದು ಬೇಡಿಕೆಗೆ ತಕ್ಕಷ್ಟು ಪೂರೈಕೆಗಾಗಿ ಉತ್ಪಾದನೆ ಹೆಚ್ಚಿಸಿಕೊಳ್ಳಬೇಕಿದೆ. ಅದಕ್ಕಾಗಿ ಮೂಲಸೌಕರ್ಯ, ಸುಸಜ್ಜಿತ ಕಟ್ಟಡ, ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕಿದ್ದು ಪ್ರತಿ ಕೇಂದ್ರಕ್ಕೆ ತಲಾ 1.50 ಕೋಟಿ ರೂ.ನಂತೆ 3 ಕೋಟಿ ರೂ. ಅನುದಾನಕ್ಕಾಗಿ ಬೇಡಿಕೆ ಸಲ್ಲಿಸಲಾಗಿದೆ.

**ಕೃಷಿಯಲ್ಲಿ ಉಪಯೋಗ**

ರಾಸಾಯನಿಕ ಕೀಟನಾಶಕ ಬಳಸದೇ ಹಾನಿಕಾರಕ ಕೀಟಗಳನ್ನು ಸ್ವಾಭಾವಿಕವಾಗಿ ನಿಯಂತ್ರಿಸಲು ಪ್ಯಾರಸಿಟಾಯ್ಡ್‌ಗಳನ್ನು ಜಮೀನಿಗೆ ಬಿಡಲಾಗುತ್ತದೆ. ತೆಂಗು ಜೊತೆಗೆ, ಕಬ್ಬು, ಕಾಫಿ, ಹತ್ತಿ ಮುಂತಾದ ಬೆಳೆಗಳಲ್ಲಿ ಕೀಟ ನಿಯಂತ್ರಣಕ್ಕೆ ವ್ಯಾಪಕವಾಗಿ ಅದನ್ನು ಬಳಸಲಾಗುತ್ತಿದೆ. ಪ್ಯಾರಸಿಟಾಯ್ಡ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಇಳುವರಿ ಕಾಣ ಬಹುದು. ರಾಸಾಯನಿಕ ಕೀಟನಾಶಕಗಳ ಅವಲಂಬನೆಯೂ ಕಡಿಮೆಯಾಗುತ್ತದೆ. ಸಾಂಪ್ರದಾಯಿಕ ಹಾಗು ಪ್ರಮುಖ ವಾಣಿಜ್ಯ ಬೆಳೆಯಾದ ತೆಂಗು ಉಳಿಸಿ ಕೊಳ್ಳಬೇಕೆಂದರೆ ಜೈವಿಕ ನಿಯಂತ್ರಣ ಪ್ರಯೋಗಾಲಯದ ಅವಶ್ಯ ಕತೆ ಹೆಚ್ಚಿದ್ದು ಸರ್ಕಾರಗಳು ಹೇಗೆ ಸ್ಪಂದಿಸುತ್ತವೆಂಬುದನ್ನು ಕಾದು ನೋಡಬೇಕಿದೆ.

**ಎಲ್ಲಾ ಜಿಲ್ಲೆಗಳಲ್ಲೂ ವಿಸ್ತರಣೆ**

ಪ್ರಮುಖ ಬೆಳೆಗಳನ್ನು ವಿವಿಧ ಕೀಟ ಬಾಧೆಯಿಂದ ರಕ್ಷಿಸಲು ಪ್ಯಾರಾಸಿಟಾಯ್ಡ್‌ಗಳಿಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಆಸಕ್ತಿ ತೋರಿದೆ. ಎಲ್ಲಾ ಜಿಲ್ಲೆಗಳಲ್ಲೂ ಪ್ಯಾರಾಸಿಟಾಯ್ಡ್ ಉತ್ಪಾದನಾ ಪ್ರಯೋಗಾಲಯಕ್ಕೆ ಸೌಕರ್ಯ ಕಲ್ಪಿಸಲು ರಾಜ್ಯ ಸರ್ಕಾರವೂ ಚಿಂತನೆ ನಡೆಸಿದೆ. ತುಮಕೂರು ಹಾಗು ಹಾಸನದಲ್ಲಿ ಪ್ರಯೋಗಾಲಯ ವಿಸ್ತರಿಸಿ ನಂತರ ಇತರ ಜಿಲ್ಲೆಗಳಿಗೆ ಸೌಲಭ್ಯ ಕಲ್ಪಿಸುವ ಚಿಂತನೆ ನಡೆದಿದೆ. ಈ ಬಗ್ಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರಿಂದ ರಾಜ್ಯ ಸರ್ಕಾರ ಹಾಗು ಸಂಸದ ಶ್ರೇಯಸ್ ಪಟೇಲ್ ಅವರಿಂದ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಕೆಯಾಗಿದೆ.

CMYK CMYK CMYK CMYK

# ಡ್ರಗ್ಸ್‌ಗೆ ಕಡಿವಾಣ ಹಾಕಲು ಹೇಳಿದರೆ ನಕ್ಕು ಸುಮ್ಮನಾದರು

## ಸ್ವಪಕ್ಷದವರ ನಡೆಗೆ ಬಿ.ಆರ್.ಪಾಟೀಲ್ ಬೇಸರ । ಡ್ರಗ್ಸ್ ಮುಕ್ತ ಭಾರತ ಆಂದೋಲನ

• ಪ್ರಜೋದಯ ವರದಿ

**ಸಕಲೇಶಪುರ:** ನಮ್ಮ ಸರ್ಕಾರ ಅಧಿ ಕಾರಕ್ಕೆ ಬಂದರೆ ರಾಜ್ಯದಲ್ಲಿ ಡ್ರಗ್ಸ್ ಮಾರಾಟ ಹಾಗು ಸೇವನೆಗೆ ಕಡಿವಾಣ ಹಾಕುವ ಕುರಿತು ಪ್ರಣಾಳಿಕೆಯಲ್ಲಿ ಪ್ರಕಟಿಸುವಂತೆ ಕೋರಿದ್ದಕ್ಕೆ ನಮ್ಮ ವರಿಷ್ಠರು ನಕ್ಕು ಸುಮ್ಮನಾಗಿದ್ದರೆಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ್ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ಗುರುವಾರ ನಡೆದ ಡ್ರಗ್ಸ್ ಮುಕ್ತ ಭಾರತ ಆಂದೋಲನದ ಅಧ್ಯಕ್ಷತೆ ವಹಿಸಿ ಮಾತನಾಡಿ, ಚುನಾವಣಾ ಪ್ರಣಾಳಿಕೆಯಲ್ಲಿ ಡ್ರಗ್ಸ್ ನಿಷೇಧ ಸೇರಿಸಬೇಕೆಂದು ಕಾಂಗ್ರೆಸ್ ಉಸ್ತುವಾರಿ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಲ್ಲಿ ಮನವಿ ಮಾಡಿದ್ದೆ. ಆಗ ಅವರು ನಕ್ಕು ಸುಮ್ಮನಾದರು. ಈ ವಿಚಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ತಂದಿದ್ದೆ. ಪಾನ ನಿಷೇಧ ಕೇವಲ ಒಂದು ರಾಜ್ಯದಲ್ಲಿ ಮಾಡಿದರೆ ಸಾಲದು, ಇಡೀ ದೇಶದಲ್ಲೇ ಜಾರಿಯಾಗಬೇಕೆಂದರು.

ಮದ್ಯ ಮಾರಾಟದಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ಆದಾಯ ಬರುತ್ತಿದೆಯಾದರೂ ಅದು ಬಡವರ ಕಣ್ಣೀರಿನ ಮತ್ತು ಪಾಪದ ಹಣ. ಸಾರ್ವಜನಿಕರ ಆರೋಗ್ಯ ಹಾಗು ಹಣವನ್ನು ಕಿತ್ತುಕೊಳ್ಳುವುದು ಬೇಡ ಎನ್ನುವುದು ನನ್ನ ನಿಲುವು. ಈಗಲೂ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುತ್ತಾರೆ. ಈ ವಿಷಯದಲ್ಲಿ ನಾನು ಸರ್ಕಾರದ ಕಿವಿ ಹಿಂಡಲು ಹೋದರೆ ಮನೆಗೆ ಹೋಗ ಬೇಕಾಗಬಹುದು. ಆದರೂ ಯಾವುದಕ್ಕೂ ಹೆದರದೆ ಧೈರ್ಯವಾಗಿ ಮಾತನಾಡುತ್ತೇನೆಂದರು.

ಪ್ರಧಾನಿ ನರೇಂದ್ರ ಮೋದಿ ದೇಶದಲ್ಲಿ ಪಾನ ನಿಷೇಧ ಜಾರಿಗೆ ತರುತ್ತಾರೆಂದರೆ ಅವರಿಗೆ ನಾನು ಸಾವಿರ ಸಲಾಂ ಹೊಡೆಯುತ್ತೇನೆ. ರಾಜ್ಯ ಮಾತ್ರವಲ್ಲದೆ ಇಡೀ ದೇಶವನ್ನು ಡ್ರಗ್ಸ್ ಹಾಗು ಮದ್ಯ ಮುಕ್ತವಾಗಿಸಬೇಕೆಂದು ಒತ್ತಾಯಿಸಿದರು.

**ಮಕ್ಕಳಿಗೆ ಶಿಕ್ಷಣ ಮುಖ್ಯ**

ಮಹಾರಾಷ್ಟ್ರದ ಡ್ರಗ್ಸ್ ವಿರೋಧಿ ಹೋರಾಟಗಾರ ಅವಿನಾಶ್ ಕಾಕಡೆ ಅವರು ಮಾತನಾಡಿ, ಊರಿನ ತುಂಬಾ ನಶಾ ಮುಕ್ತ ಕೇಂದ್ರಗಳಿರಬೇಕೆ ಅಥವಾ ಯುವಕರು ನಶೆಯಲ್ಲಿ ಮುಳುಗುವಂತಹ ಸ್ಥಳಗಳಿರಬೇಕೆ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಿದೆ. ಮನುಷ್ಯನಿಗೆ ಬೌದ್ಧಿಕ ಮತ್ತು ದೈಹಿಕ ಅಗತ್ಯಗಳಿವೆ. ರೊಟ್ಟಿ, ಶಿಕ್ಷಣ ಸೇರಿ ಮೂಲ ಅಗತ್ಯತೆಗಳೊಂದಿಗೆ ಯೋಚನಾ ಶಕ್ತಿ ಬೆಳೆಸುವ ಸಾಮರ್ಥ್ಯವೂ ಇರಬೇಕೆಂದರು.

ನಶೆಯಿಂದ ಮುಕ್ತವಾದಾಗ ಮಾತ್ರ ಸಮಾಜದಲ್ಲಿ ನೆಮ್ಮದಿ ಸಾಧ್ಯ. ಪೋಷಕರು ಶಿಕ್ಷಣ ಪಡೆದಿದ್ದರೆ ಅವರ ಮಕ್ಕಳು ಸಚ್ಚಾರಿತ್ರ್ಯವಂತರಾಗುತ್ತಾರೆ. ಮಕ್ಕಳು ನಶೆಯಲ್ಲಿ ತೊಡಗಿರುವವರ ನಡುವೆ ಬೆಳೆದರೆ, ಅವರನ್ನು ಅನುಸರಿಸಿ ಡ್ರಗ್ಸ್‌ಗೆ ಬಲಿಯಾಗುತ್ತಾರೆ. ಇದು ದೇಶಕ್ಕೆ ಮಾರಕವೆಂದು ಎಚ್ಚರಿಸಿದರು.

ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ಮಾತನಾಡಿ, ಮಕ್ಕಳನ್ನು ಗುರಿಯಾಗಿಸಿ ಭಾರತವನ್ನು ಡ್ರಗ್ಸ್‌ನಲ್ಲಿ ಮುಳುಗಿಸಲು ದೊಡ್ಡ ದೇಶಗಳ ಸಂಚು ನಡೆಯುತ್ತಿದೆ ಎಂದರು. ಅಮೇರಿಕಾ ಸೇರಿ ಕೆಲವು ರಾಷ್ಟ್ರಗಳು ನಮ್ಮ ದೇಶದ ಮಕ್ಕಳನ್ನು ವ್ಯಸನಕ್ಕೆ ದಾಸರನ್ನಾಗಿಸುವ ಮೂಲಕ ರಾಷ್ಟ್ರವಿರೋಧಿ ಸಂಚುಗಳನ್ನು ರೂಪಿಸುತ್ತಿವೆ ಎಂದು ಅವರು ಆರೋಪಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಗಾಂಧಿವಾದಿ ಪ್ರಸನ್ನ ಅವರು ಮಾತನಾಡಿ, ಮಾದಕ ವಸ್ತು ಮುಕ್ತ ಭಾರತ ಕಟ್ಟುವ ಕಾರ್ಯದಲ್ಲಿ ಸಕಲೇಶಪುರದ ಜನರ ಜೊತೆ ಕೈಜೋಡಿಸಿರುವುದು ತೃಪ್ತಿದಾಯಕವಾಗಿದೆ. ನಶೆ ಅನಾದಿ ಕಾಲದಿಂದಲೂ ಇದ್ದರೂ ಇಂದಿನ ಮಿತಿ ಮೀರಿದ ಸೇವನೆ ಆಧುನಿಕತೆಗೆ ಮಾರಕವಾಗಿದೆ ಎಂದು ಆತಂಕಿಸಿದರು.

ಡಿವೈಎಸ್ಪಿ ಪ್ರಮೋದ್ ಕುಮಾರ್ ಅವರು ಮಾತನಾಡಿ, ಡ್ರಗ್ಸ್ ಸಂಬಂಧಿತ ಮಾಹಿತಿ ತಿಳಿದಿದ್ದರೂ ಮೌನ ವಹಿಸುವುದು ಅಪಾಯಕಾರಿ. ಅದು ಪರೋಕ್ಷವಾಗಿ ವ್ಯಸನಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಪೊಲೀಸರು ಸಮಾಜದ ಒಳಿತಿಗಾಗಿ ಮುನ್ನಡೆಯುತ್ತಿದ್ದಾರೆ. ಪ್ರತಿಯೊಬ್ಬರೂ ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ ಅವರು ಮಾತನಾಡಿ, ಪರಿಚಯದವರ ಮನೆಯಲ್ಲಿಯೇ ಮಗ ನಶೆಗೆ ದಾಸನಾಗಿ ತಂದೆ ತಾಯಿಯನ್ನು ಕಾಡುತ್ತಿರುವುದನ್ನು ಕಂಡಿದ್ದೇವೆ. ಆದ್ದರಿಂದ ಪ್ರತಿ ಶಾಲೆಯಲ್ಲೂ ವ್ಯಸನ ವಿರೋಧಿ ಶಿಕ್ಷಣ ನೀಡಲಾಗುತ್ತಿದೆ. ಮನೆಯಲ್ಲೂ ಪೋಷಕರು ಮಕ್ಕಳ ಜೊತೆಗಿದ್ದು ಜಾಗ್ರತೆ ವಹಿಸಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷೆ ಶಾರದ ಗುರುಮೂರ್ತಿ, ಡಾ॥ ನವೀನ್ ಚಂದ್ರ, ಅಲಿಬಾಬಾ ಮತ್ತಿತರರಿದ್ದರು.



## ತೆಂಗಿನ ಮರಕ್ಕೆ ಕೀಟಬಾಧೆ-ನಿರ್ವಹಣೆ ಕಾರ್ಯಾಗಾರ



• ಪ್ರಜೋದಯ ವರದಿ

**ಹಾಸನ:** ಕಾರೆಕೆರೆ ಕೃಷಿ ಮಹಾವಿದ್ಯಾಲಯ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ದುದ್ದ ಹೋಬಳಿ ಹಾರನಹಳ್ಳಿಯಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ತೆಂಗಿನಕಾಯಿ ಉತ್ಪಾದನಾ ತಂತ್ರಜ್ಞಾನ ಹಾಗು ಕೀಟ-ರೋಗ ನಿರ್ವಹಣೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮಹಾವಿದ್ಯಾಲಯದ ತೋಟಗಾರಿಕೆ ವಿಭಾಗ ಸಹ ಪ್ರಾಧ್ಯಾಪಕ ಡಾ. ಕಿರಣ್ ಸಾಗರ್ ಅವರು ತೆಂಗಿನಕಾಯಿ ಬೆಳೆಗಾಗಿ ಅನುಸರಿಸಬೇಕಾದ ಕ್ರಮಗಳ ಮಾಹಿತಿ ನೀಡಿದರು. ಉತ್ತಮ ತಳಿಗಳ ಆಯ್ಕೆ, ಸರಿಯಾದ ಅಂತರದಲ್ಲಿ ನೆಡುವುದು, ಸಮರ್ಪಕ ನೀರಾವರಿ, ಗೊಬ್ಬರ ನಿರ್ವಹಣೆ ಮತ್ತು ಮಣ್ಣಿನ ಆರೋಗ್ಯ ಕಾಪಾಡುವ ಕ್ರಮಗಳ ಕುರಿತು ಅವರು ಜಾಗೃತಿ ಮೂಡಿಸಿದರು.

ತೆಂಗಿನಕಾಯಿ ಬೆಳೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕೆಂಪು ಮೂತಿ ಹುಳು, ರೈನೋಸೆರಸ್ ಬೀಟಲ್, ನುಸಿ ಹುಳು ಮತ್ತು ಹರಳು ಉದುರುವಿಕೆ, ಅಣಬೆ ರೋಗ, ಕಾಂಡ ರಸ ಸೋರುವಿಕೆ ಬಗ್ಗೆ ವಿದ್ಯಾರ್ಥಿಗಳು ವಿವರಿಸಿದರು. ವಿದ್ಯಾರ್ಥಿ ಅನಿರುದ್ಧ ಕಾರ್ಯಕ್ರಮ ನಿರ್ವಹಿಸಿದರು.

## 6ನೇ ತರಗತಿ ಪ್ರವೇಶಕ್ಕೆ ಅವಧಿ ವಿಸ್ತರಣೆ

• ಪ್ರಜೋದಯ ವರದಿ

ಹಾಸನ: ಜವಾಹರ ನವೋದಯ ವಿದ್ಯಾಲಯ 6ನೇ ತರಗತಿ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಯನ್ನು ಈಗಾಗಲೇ ಅಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಆ.27 ವರೆಗೆ ವಿಸ್ತರಿಸಲಾಗಿದೆ. . https://cbseitms.rcil.gov.in/nvs ವೆಬ್ ಸೈಟ್ ಮೂಲಕ ಅರ್ಜಿಯನ್ನು ಹಾಸನ ಜಿಲ್ಲೆಯಲ್ಲಿ, 2025-26 ನೇ ಸಾಲಿನಲ್ಲಿ, ಸರ್ಕಾರಿ/ ಸರ್ಕಾರಿ ಮಾನ್ಯತೆ ಪಡೆದ ಶಾಲೆಗಳಲ್ಲಿ 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ನೊಂದಾಯಿಸಬಹುದಾಗಿದೆ ಎಂದು ಪಿಎಂ ಶ್ರೀ ಸ್ಕೂಲ್ ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರು ತಿಳಿಸಿದ್ದಾರೆ.

## ಮಕ್ಕಳ ಮನೆಯಲ್ಲಿ ಕೃಷ್ಣ ಜನ್ಮಾಷ್ಟಮಿ



• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಹನ್ಯಾಳು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳ ಮನೆ ವಿಭಾಗದಿಂದ ಅತ್ಯಂತ ವೈಭವದ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು.

ಮಕ್ಕಳು ವಿವಿಧ ರೀತಿಯ ಕೃಷ್ಣ ಹಾಗೂ ರಾಧೆಯ ವೇಷಧಾರಿಗಳಾಗಿ ಮುದ್ದಾಗಿ ಕಂಗೊಳಿಸುತ್ತಿದ್ದರು. ಬಾಲ ಕೃಷ್ಣ ಹಾಗೂ ಬಾಲ ಗೋಪಿಕೆಯರನ್ನು ನೋಡಲು ಪೋಷಕರು ಹಾಗೂ ಗ್ರಾಮಸ್ಥರು ಶಾಲೆಗೆ ಆಗಮಿಸಿ ಮಕ್ಕಳ ಮನೆಯ ಮಕ್ಕಳ ಪ್ರತಿಭೆಯನ್ನು ಮೆಚ್ಚಿ ಪ್ರಶಂಸಿದರು.

ನಮ್ಮ ಬಡ ರೈತರ ಮಕ್ಕಳು ಓದುತ್ತಿರುವ ನಮ್ಮ ಹೆಮ್ಮೆಯ ನಮ್ಮೂರಿನ ಸರ್ಕಾರಿ ಶಾಲೆ ಎಂದು ಮಕ್ಕಳ ಪೋಷಕರು ಹರ್ಷ ವ್ಯಕ್ತಪಡಿಸಿದರು.

## ದೀಕ್ಷಾ ಭೂಮಿ ಯಾತ್ರೆ

**ಹಾಸನ:** ಡಾ.ಬಿ.ಆರ್. ಅಂಬೇಡ್ಕರ್ ಅನುಯಾಯಿಗಳು ಮಹಾರಾಷ್ಟ್ರ ನಾಗಪುರದಲ್ಲಿನ ದೀಕ್ಷಾ ಭೂಮಿ ಯಾತ್ರೆಗೆ ಸೆ.30 ರಿಂದ ಅ.04 ರ ವರೆಗೆ ವಿವಿಧ ಜಿಲ್ಲೆಗಳಿಂದ ಪ್ರಯಾಣಿಸಿ ಹಾಗೂ ಹಿಂದಿರುಗಿ ಬರುವ ಸಂಬಂಧ ಬಸ್ಸು ಮತ್ತು ರೈಲಿನ ಮೂಲಕ ವ್ಯವಸ್ಥೆ ಕಲ್ಪಿಸಲಾಗುತ್ತಿದ್ದು, ಅರ್ಹ ಯಾತ್ರಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ ಲಿಂಕ್ https://swd.karnataka.gov.in/ website ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಆ.25 ರಿಂದ ಸೆ.09 ರವರೆಗೆ ಅರ್ಜಿ ಸ್ವೀಕರಿಸಲು ಕೊನೆಯ ದಿನವಾಗಿದೆ.

ದಾಖಲಾತಿಗಳನ್ನು ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಿ.ಆರ್.ಅಂಬೇಡ್ಕರ್ ಭವನ, ಹಾಸನ ಇಲ್ಲಿಗೆ ಸಲ್ಲಿಸಬಹುದಾಗಿದೆ.

## ಸಮುದಾಯ ಏಳಿಗೆಗೆ ಸಂಘಟಿತ ಹೋರಾಟ ಮುಖ್ಯ

• ಪ್ರಜೋದಯ ವರದಿ

**ಹಾಸನ:** ಯಾವುದೇ ಒಂದು ಸಮುದಾಯ ಆರ್ಥಿಕ, ಸಾಮಾಜಿಕ ಹಾಗು ರಾಜಕೀಯವಾಗಿ ಪ್ರಾತಿನಿಧ್ಯ ಪಡೆಯಬೇಕೆಂದರೆ ಸಂಘಟಿತ ಹೋರಾಟ ಮುಖ್ಯವೆಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಯುವ ಘಟಕದ ಜಿಲ್ಲಾಧ್ಯಕ್ಷ ಎನ್.ಟಿ. ಶ್ರೀನಿವಾಸ್ ಅವರು ಹೇಳಿದರು.

ಇಲ್ಲಿನ ಜಯನಗರದ ಭಗತ್ ಸಿಂಗ್ ರಸ್ತೆಯಲ್ಲಿ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು,

ಇಂದು ಸ್ವಯಂ ಘೋಷಿತ ಅಧ್ಯಕ್ಷರ ಕಾರುಬಾರು ಹೆಚ್ಚಾಗಿದೆ. ಅಂಥವರೂ ಸಮಾಜಮುಖಿ ಕೆಲಸದಲ್ಲಿ ತೊಡಗಿದರೆ ನಮ್ಮ ತಕರಾರಿಲ್ಲ. ಆದರೆ ವೈಯಕ್ತಿಕ ಲಾಭಕ್ಕಾಗಿ ಸಮುದಾಯದ ಹೆಸರು ದುರುಪಯೋಗ ಆಗಬಾರದೆಂದರು.



ಗೌರವಾಧ್ಯಕ್ಷ ಹನುಮಪ್ಪ ಅವರು ಮಾತನಾಡಿ, ಸಂಘದಲ್ಲಿ ರಾಜಕೀಯ ಬೆರೆಸಬಾರದು. ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗುವ ಮೂಲಕ ಸಮಾಜಕ್ಕೆ ಅನುಕೂಲ ಮಾಡಿ ಎಂದರು.

ರಾಜ್ಯ ಉಪಾಧ್ಯಕ್ಷ ರವಿಕುಮಾರ್ ಅವರು ಮಾತನಾಡಿ, ನಾನು ಅರಸೀಕೆರೆ ವಾಲ್ಮೀಕಿ ನಾಯಕರ ಸಂಘದ ನಿರ್ದೇಶಕನಾಗಲು ಪ್ರಯತ್ನಿಸಿದ್ದೆ. ಪರಿಶ್ರಮ ಹಾಗು ಹೋರಾಟದ ಮೂಲಕ ಜಿಲ್ಲಾಧ್ಯಕ್ಷ ಸ್ಥಾನ ಅಲಂಕರಿಸಿದೆ. ನನ್ನ ಅವಧಿಯಲ್ಲಿ ಯಾವ ತಪ್ಪು ಮಾಡಿಲ್ಲ. ಶ್ರಮವಹಿಸಿ ಸ್ವಂತ ಹಣ ಖರ್ಚು ಮಾಡಿ ಸಂಘಟನೆ ಮಾಡಿದ್ದೇನೆಂದರು.

ಸಮುದಾಯದ ಜಯಣ್ಣ, ದೊಡ್ಡರಂಗಯ್ಯ, ಕೃಷ್ಣನಾಯಕ, ಜಯಣ್ಣ, ಡಾ. ಬಿ.ಆರ್. ಅಂಬೇಡ್ಕರ್ ಬ್ರಿಗೇಡ್‌ನ ರಾಜೇಶ್ ಮತ್ತಿತರರಿದ್ದರು.

## ಇಂದು ವಿಶ್ವ ಜಾನಪದ ದಿನಾಚರಣೆ

ಹಾಸನ: ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು, ಜಿಲ್ಲಾ ಮತ್ತು ತಾಲ್ಲೂಕು ಘಟಕ ಹಾಸನ, ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ ಎಂ.ಜಿ ರಸ್ತೆ ಹಾಸನ ಇವರ ಸಹಯೋಗದಲ್ಲಿ ಆ.22 ರಂದು ಬೆ.11 ಗಂಟೆಗೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ವಿಶ್ವ ಜಾನಪದ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷರಾದ ಡಾ. ಹಂಪನಹಳ್ಳಿ ತಿಮ್ಮೇಗೌಡ ಅವರು ಪ್ರಸ್ತಾವಿಕ ನುಡಿ ನುಡಿಯಲಿದ್ದು, ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥ ಅವರು ಉದ್ಘಾಟಿಸಲಿದ್ದಾರೆ.

## ಬಾಳೆಯಲ್ಲಿ ಅಂಗಾಂಶ ಕೃಷಿಯ ಮಹತ್ವ



ಹಾಸನ: ಕೃಷಿ ಮಹಾವಿದ್ಯಾಲಯ, ಕಾರೇಕೆರೆ, ಹಾಸನದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಡಿಯಲ್ಲಿ ಅಂತಿಮ ವರ್ಷದ ಕೃಷಿ ಮತ್ತು ಬಿ. ಟೆಕ್. ಜೈವಿಕ ತಂತ್ರಜ್ಞಾನದ ವಿದ್ಯಾರ್ಥಿಗಳು 'ಬಾಳೆಯಲ್ಲಿ ಅಂಗಾಂಶ ಕೃಷಿ'ಯ ಮಹತ್ವ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿದ್ದರು. ಈ ಸಂದರ್ಭದಲ್ಲಿ ಡಾ. ಭರತ್ ಪ್ರಸಾದ್.ಸಿ.ಟಿ, ಸಹಾಯಕ ಪ್ರಾಧ್ಯಾಪಕರು, ಸಸ್ಯ ಜೈವಿಕ ತಂತ್ರಜ್ಞಾನ ವಿಭಾಗ ಇವರು ಉಪಸ್ಥಿತರಿದ್ದರು.

# ಹಣದ ವ್ಯಾಮೋಹದಿಂದ ಮನಃಶಾಂತಿಗೆ ಭಂಗ

## ಶ್ರೀ ಶಿವಲಿಂಗ ಸ್ವಾಮೀಜಿ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮದಲ್ಲಿ ಶ್ರೀ ಕೋಡಿಮಠ ಸ್ವಾಮೀಜಿ

• ಪ್ರಜೋದಯ ವರದಿ

**ಅರಸೀಕೆರೆ:** ತಮ್ಮ ತಪೋಶಕ್ತಿಯಿಂದ ಮನುಕುಲಕ್ಕೆ ಬೆಳಕು ನೀಡಿದ ಸುಕ್ಷೇತ್ರ ಕೋಡಿಮಠದ ಮಹಾ ತಪಸ್ವಿಗಳು ಪೂಜ್ಯರಾದ ಶ್ರೀ ಶಿವಲಿಂಗ ಮಹಾ ಸ್ವಾಮಿಗಳು ಎಂದು ಕೋಡಿಮಠದ ಜಗದ್ಗುರು ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿಯವರು ಸ್ಮರಿಸಿದರು.

ಸುಕ್ಷೇತ್ರ ಕೋಡಿಮಠದ ಸಭಾಂಗಣದಲ್ಲಿ ನಡೆಯುತ್ತಿರುವ ಪೂಜ್ಯ ಶಿವಲಿಂಗ ಸ್ವಾಮೀಜಿಯವರ ಶ್ರಾವಣ ಮಾಸದ ಏಳನೇ ದಿನದ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮದ ಸಾನಿಧ್ಯ ವಹಿಸಿ ಶ್ರೀಗಳು ಭಕ್ತರಿಗೆ ಆಶೀರ್ವಚನ ನೀಡಿ ಮಾತನಾಡಿದ ಅವರು, ಇಂದು ಆಧುನಿಕ ಜೀವನ ಶೈಲಿಯ ಹಣದ ವ್ಯಾಮೋಹಕ್ಕೆ ಒಳಗಾಗಿ ಮನುಷ್ಯ ಮನಃಶಾಂತಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಆದ್ದರಿಂದ ಮಾನವನಿಗೆ ಧಾರ್ಮಿಕ ಪುರಾಣ ಪ್ರವಚನಗಳು ನೆಮ್ಮದಿ ನೀಡುತ್ತವೆ. ಕ್ಷೇತ್ರವು ತಪೋಶಕ್ತಿಯ ಬಂಡಾರವಾಗಿದ್ದು ಶಿವಲಿಂಗಜ್ಜಯ್ಯ, ನೀಲಮ್ಮ ಅಜ್ಜಯ್ಯ ದೈವ ಪುರುಷರು ಭಕ್ತರನ್ನು ಉದ್ದರಿಸಲು ಈ ಧರೆಯಲ್ಲಿ ಅವತರಿಸಿ ಜನರಲ್ಲಿ ಧಾರ್ಮಿಕ ಭಾವನೆಯನ್ನು ಬೆಳೆಸಲು ಶ್ರಮಿಸಿದ್ದಾರೆ ಎಂದು ಸ್ವಾಮೀಜಿ ತಿಳಿಸಿದರು.



ಕೋಡಿಮಠವು ಜಾತಿ ಧರ್ಮ ಬೇದ ಭಾವ ಎನ್ನದೆ ಎಲ್ಲರನ್ನೂ ಸಮಾನವಾಗಿ ಕಾಣುವ ಜಾತ್ಯಾತೀತ ಮಠವಾಗಿದ್ದು ಇಂತಹ ಧಾರ್ಮಿಕ ಕಾರ್ಯಕ್ರಮಗಳಿಂದ ಶಾಂತಿ ನೆಮ್ಮದಿ ಭಕ್ತಿ ಭಾವನೆಗಳು ಬೆಳೆಯುತ್ತವೆ ಎಂದು ಸ್ವಾಮೀಜಿ ಹೇಳಿದರು.

ನಾಡ ಗುರು ಹಿರೇಮಠ ಬೆಳಗಾವಿ ಮೃತ್ಯುಂಜಯ ಸ್ವಾಮೀ ಶಿವಲಿಂಗ ಮಹಾ ಸ್ವಾಮೀಜಿಯವರ ಪುರಾಣ ಪ್ರವಚನ ಪಠಿಸಿದರು. ಕ್ಷೇತ್ರದ ಉತ್ತರಾಧಿಕಾರಿ ಚೇತನ್ ಮರಿ ದೇವರು ಕುಮಾರಿ ಶಿವಾನಿ,ಗುರು ಮಲ್ಲಯ್ಯ,ಮಾಡಾಳು ಶಿವಲಿಂಗಪ್ಪ, ಎಂಡಿ ಸೋಮಶೇಖರ್, ಲೋಕೇಶ್, ಕಟ್ನೆ ತಿಮ್ಮಯ್ಯ, ಕೋಡಿ ಮಠದ ಏಜೆಂಟ್ ಸಿ. ಮಹದೇವಪ್ಪ ಸೇರಿದಂತೆ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಲಯನ್ಸ್ ಕ್ಲಬ್‌ನಿಂದ 8 ಸಾವಿರ ಬೀಜಾಂಕುರ



• ಪ್ರಜೋದಯ ವರದಿ

**ಬೇಲೂರು:** ಅಂತರರಾಷ್ಟ್ರೀಯ ಲಯನ್ಸ್ ಸೇವಾ ಸಂಸ್ಥೆ 317ಡಿ ವ್ಯಾಪ್ತಿಯಲ್ಲಿ ಬರುವ ಲಯನ್ಸ್ ಕ್ಲಬ್ 12 ಪ್ರಾಂತ್ಯದ ಎಂಟು ಕ್ಲಬ್‌ಗಳ ಸಹಯೋಗದೊಂದಿಗೆ ಆ.23 ರಂದು ಬೆಳಿಗ್ಗೆ 8 ಗಂಟೆಗೆ ಪಟ್ಟಣದ ಬಿಕ್ಕೋಡು ರಸ್ತೆಯ ಸನ್ ಶೈನ್ ಪೆಟ್ರೋಲ್ ಬಂಕ್ ಕಾಚೀಹಳ್ಳಿ ಗಿಡ ನಡೆವುದು ಮತ್ತು ಜೀಜಾಂಕುರಕ್ಕೆ ಚಾಲನೆ ನೀಡಲಾಗುತ್ತದೆ ಎಂದು ಲಯನ್ಸ್ ಕ್ಲಬ್ ಪ್ರಾಂತೀಯ ಅಧ್ಯಕ್ಷ ಅಬ್ದುಲ್ ಲತೀಪ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಂತರರಾಷ್ಟ್ರೀಯ ಲಯನ್ಸ್ ಕ್ಲಬ್ ಜಗತ್ತಿನ 220 ರಾಷ್ಟ್ರದಲ್ಲಿ ಸೇವಾ ಕಾರ್ಯ ನಡೆಸುತ್ತಿರುವ ಅಗ್ರಮಾನ್ಯ ಸೇವಾ ಸಂಸ್ಥೆ ಎಂಬ ಖ್ಯಾತಿಯನ್ನು ಪಡೆದಿದೆ, ಆಗಸ್ಟ್ 23 ರಂದು ಪರಿಸರದ ಕಡೆ ನಮ್ಮ ನಡಿಗೆ ಎಂಬ ಘೋಷ ವ್ಯಾಕ್ಯದೊಂದಿಗೆ ಎಂಟು ಸಾವಿರ ಗಿಡ ಮತ್ತು ಸೀಡ್ ಬಾಲ್ ಎಂದರೆ ಬೀಜಾಂಕುರ ನಡೆಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಮತ್ತು ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಉದ್ಘಾಟನೆ ನಡೆಸಲಿದ್ದಾರೆ ಎಂದರು.

ಬೇಲೂರು ಲಯನ್ಸ್ ಕ್ಲಬ್ ಅಧ್ಯಕ್ಷೆ ತಾರಾಮಣಿ ಸುರೇಶ್ ಲಯನ್ಸ್ ಕ್ಲಬ್ ವಲಯ ಅಧ್ಯಕ್ಷ ಚಾಮರಾಜ್, ಬಿಕ್ಕೋಡು ಕ್ಲಬ್ ಅಧ್ಯಕ್ಷ ಲತೇಶ್, ಬೇಲೂರು ಕ್ಲಬ್ ಕಾರ್ಯದರ್ಶಿ ಆದರ್ಶ ಮತ್ತು ಖಜಾಂಚಿ ಸಂತೋಷ ಹಾಜರಿದ್ದರು.

## ಅನ್ಯ ಭಾಷಿಕರ ದಬ್ಬಾಳಿಕೆಗೆ ಕಡಿವಾಣ ಅಗತ್ಯ

• ಪ್ರಜೋದಯ ವರದಿ

**ಹೊಳೆನರಸೀಪುರ:** ಸಂಘಟನೆಗೆ ಒತ್ತು ನೀಡುವ ಮೂಲಕ ನಾಡಿನ ಸಂಸ್ಕೃತಿಯ ಸಂರಕ್ಷಣೆಗೆ ರೂಪುಗೊಂಡ ಹೋರಾಟವೇ ಕರವೇ ಸಂಘಟನೆ ಎಂದು ಕರವೇ ಜಿಲ್ಲಾಧ್ಯಕ್ಷ ಮನುಕುಮಾರ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಕ್ಷಣಾ ವೇದಿಕೆ ತಾಲ್ಲೂಕು ಘಟಕದ ಪದಗ್ರಹಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರು ಸೇರಿದಂತೆ ನಾನಾ ಭಾಗದಲ್ಲಿ ಅನ್ಯ ಭಾಷಿಕರ ದಬ್ಬಾಳಿಕೆಯನ್ನು ಸರಿಪಡಿಸಿಕೊಳ್ಳಬೇಕಾಗಿದೆ. ಸ್ಥಳೀಯವಾಗಿಯೂ ಉದ್ಭವವಾಗುವ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸಬೇಕಾಗುತ್ತಿದೆ. ಈ ನಿಟ್ಟಿನಲ್ಲಿ ರಾಜ್ಯದ ಉದ್ದಗಲಕ್ಕೂ ಸಂಘ ಹೋರಾಡಬೇಕಾಗುತ್ತಿದೆ ಎಂದರು.

ಸೆ.2 ರಂದು ಕರವೇ ರಾಜ್ಯಾಧ್ಯಕ್ಷ ನಾರಾಯಣಸ್ವಾಮಿ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಸಭೆ ನಡೆಸಲಾಗುವುದು. ಸಭೆಗೆ ಪ್ರತಿ ಹೋಬಳಿ ಮಟ್ಟದ ಸಂಘಟಕರು, ಗ್ರಾಮದ ಯುವಕರು ಭಾಗಿಯಾಗಿ ಎಂದು ಕೋರಿದರು.





ಕರವೇ ಮಾಜಿ ಅಧ್ಯಕ್ಷ ಕೆರಗೋಡು ಮಹೇಶ್ ಮಾತನಾಡಿ, ಎಲ್ಲ ಪದಾಧಿಕಾರಿಗಳ ಬೆಂಬಲದಿಂದ ಹಲವು ವರ್ಷಗಳಿಂದ ಸಂಘಟನೆಯಲ್ಲಿ ಹಲವು ಕಾರ್ಯಕ್ರಮ ನಡೆಸಲು ಸಹಕಾರಿ. ಯಾವುದೇ ಸಂಘಟನೆಗೆ ಸಂಘಟನಾ ಕಾರ್ಯಕರ್ತರೇ ಜೀವಾಳ ಎಂದರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕರವೇ ನೂತನ ಪದಾಧಿಕಾರಿಗಳು ಕನ್ನಡ ಬಾವುಟ ಹಿಡಿದು ಮೆರವಣಿಗೆ ನಡೆಸಿದರು.

ಕರವೇ ಜಿಲ್ಲಾ ಉಪಾಧ್ಯಕ್ಷ ಸೀತಾರಾಮ್, ತಾಲೂಕು ಅಧ್ಯಕ್ಷ ವಹಿಲೇಶ್, ಉಪಾಧ್ಯಕ್ಷ ರಂಗಸ್ವಾಮಿ, ನಗರ ಘಟಕದ ಅಧ್ಯಕ್ಷ ಬಿ.ಆರ್. ರೇವಣ್ಣ, ಹಳ್ಳಿಮೈಸೂರು ಹೋಬಳಿ ಅಧ್ಯಕ್ಷ ಮಲ್ಲಿಕಾರ್ಜುನ್, ಕಸಬಾ ಹೋಬಳಿ ಅಧ್ಯಕ್ಷ ಧರ್ಮರಾಜು, ಯುವಘಟಕ ಅಧ್ಯಕ್ಷ ನವೀನ್ ಹಾಗೂ ಪದಾಧಿಕಾರಿಗಳು ಇದ್ದರು.

## ವಿದ್ಯಾರ್ಥಿ ವೇತನ ಪರೀಕ್ಷೆ

• ಪ್ರಜೋದಯ ವರದಿ

**ಹಾಸನ:** ಕೃಷಿಕ್ ಸರ್ವೋದಯ ಫೌಂಡೇಶನ್ ಅಕಾಡೆಮಿಯು ತನ್ನ ವಿದ್ಯಾರ್ಥಿವೇತನ ಪರೀಕ್ಷೆಯನ್ನು ಆಗಸ್ಟ್ 23, 2025 ರಂದು ಬೆಳಿಗ್ಗೆ 11:00 ಗಂಟೆಗೆ ಕೃಷಿಕ್ ಸರ್ವೋದಯ ಭವನ ಹಾಸನ ಶಾಖೆ, ಹಾಗೂ ಚಂದ್ರಾಲೇಔಟ್ ಬೆಂಗಳೂರು ಶಾಖೆ ಮತ್ತು ಈ ಕೆಳಗಿನ ಕೆಎಸ್‌ಎಫ್ ಶಾಖೆಗಳಾದ ಮೈಸೂರು, ತುಮಕೂರು, ಚಿಕ್ಕಮಗಳೂರುಗಳಲ್ಲಿ ನಡೆಸಲಿದೆ.

ಐ.ಎ.ಎಸ್. ಕೋಚಿಂಗ್ ಪರೀಕ್ಷೆ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಆಸಕ್ತ ಅಭ್ಯರ್ಥಿಗಳು ಈ ಪರೀಕ್ಷೆಯಲ್ಲಿ ಭಾಗವಹಿಸಲು ಯಾವುದೇ ಕೆಎಸ್ ಎಫ್ ಅಕಾಡೆಮಿ ಶಾಖೆಯಲ್ಲಿ ನೊಂದಾಯಿಸಿಕೊಳ್ಳಬಹುದು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಕೆಎಸ್ ಎಫ್ ಇಂಟಿಗ್ರೇಟೆಡ್ ಪ್ರಿಲಿಮ್ಸ್ ಕಮ್ ಮೇನ್ಸ್ ಪ್ರೋಗ್ರಾಂ 2026 ಗೆ ವಿದ್ಯಾರ್ಥಿ ವೇತನ ನೀಡಲಾಗುವುದು, ಇದು ಐ.ಎ.ಎಸ್. ಮತ್ತು ಇತರ ನಾಗರಿಕ ಸೇವೆಗಳ ಪರೀಕ್ಷೆಗಳಿಗೆ ಸಮಗ್ರ ತರಬೇತಿ ನೀಡುತ್ತದೆ.

ಗುಣಮಟ್ಟದ ಕೋಚಿಂಗ್ ಮತ್ತು ವಿದ್ಯಾರ್ಥಿವೇತನ ಬೆಂಬಲದ ಮೂಲಕ ತಮ್ಮ ವೃತ್ತಿಜೀವನದ ಭವಿಷ್ಯವನ್ನು ಮುನ್ನಡೆಸಲು ಈ ಅವಕಾಶವನ್ನು ಬಳಸಿಕೊಳ್ಳಲು ಕೆಎಸ್ ಎಫ್ ಅಕಾಡೆಮಿ ಮಹತ್ವಾಕಾಂಕ್ಷೆಯ ಐಎಎಸ್ ಅಭ್ಯರ್ಥಿಗಳನ್ನು ಆಹ್ವಾನಿಸುತ್ತದೆ.

ನೋಂದಣಿ ಮತ್ತು ಹೆಚ್ಚಿನ ವಿವರಗಳಿಗಾಗಿ ಹತ್ತಿರದ ಕೆಎಸ್‌ಎಫ್ ಶಾಖೆಗೆ ಭೇಟಿ ನೀಡಿ ಅಥವಾ ಪ್ರಜ್ವಲ್, ಶೈಕ್ಷಣಿಕ ಸಂಯೋಜಕ- 87924 59334 ನ್ನು ಸಂಪರ್ಕಿಸಬಹುದು.

## ತೆಂಗು ಬೆಳೆಗೆ ಕಪ್ಪುತಲೆ ಹುಳು ಹಾವಳಿ ಸಮೀಕ್ಷೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ 1,18,792 ಹೆಕ್ಟೇರ್ ವಿಸ್ತೀರ್ಣದಲ್ಲಿ ತೆಂಗು ಬೆಳೆಯನ್ನು ಬೆಳೆಯುತ್ತಿದ್ದು, ಅಂದಾಜು ವರದಿಗಳ ಪ್ರಕಾರ 82,000 ಹೆಕ್ಟೇರ್ ವಿಸ್ತೀರ್ಣದಲ್ಲಿ ತೆಂಗು ಬೆಳೆಗೆ ಕಪ್ಪುತಲೆ ಹುಳು ಹಾಗೂ ಬಿಳಿ ನೊಣದ ಹಾವಳಿ ಕಂಡು ಬಂದಿದ್ದು, ಇದರಿಂದ ತೆಂಗಿನಲ್ಲಿ ಇಳುವರಿ ಕುಂಠಿತವಾಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ತೆಂಗು ಬೆಳೆಯಲ್ಲಿ ಕಪ್ಪುತಲೆ ಹುಳು ಹಾಗೂ ಬಿಳಿ ನೊಣದ ಹಾವಳಿ ಬಗ್ಗೆ ಸಮೀಕ್ಷೆ ನಡೆಸಲು ಸರ್ಕಾರದ ಸೂಚನೆಯಂತೆ ತೋಟಗಾರಿಕೆ ಇಲಾಖೆ ವತಿಯಿಂದ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ.

ತೆಂಗಿನಲ್ಲಿ ಕೀಟ ಬಾಧೆಯು ಹೆಚ್ಚಾಗಿ ಇಳುವರಿ ಕುಂಠಿತವಾಗುತ್ತಿರುವ ಕಾರಣ 2025-26ನೇ ಸಾಲಿನಲ್ಲಿ ಆಯವ್ಯಯ ಘೋಷಣೆಯ ಕಂಡಿಕೆ 55 ರಲ್ಲಿ ತೆಂಗಿನ ಕಪ್ಪುತಲೆ ಹುಳು ಹಾಗೂ ಬಿಳಿ ನೊಣದ ಬಾಧೆಯ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ಸೂಚಿಸಲಾಗಿರುತ್ತದೆ.



ಈ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆಯ ತೆಂಗು ಬೆಳೆಯುವ ತಾಲ್ಲೂಕುಗಳಲ್ಲಿ ತೆಂಗಿನ ಕಪ್ಪುತಲೆ ಹುಳು ಹಾಗೂ ಬಿಳಿ ನೊಣದ ಬಾಧೆಯ ಸಮೀಕ್ಷೆ ನಡೆಸಲು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು/ ಇಲಾಖೆಯಿಂದ ನಿಯೋಜಿಸಲಾಗಿರುವ ಸಿಬ್ಬಂಧಿಗಳು ರೈತರ ತೋಟಗಳಿಗೆ ಭೇಟಿ ನೀಡಲಿದ್ದಾರೆ.

ಆದ್ದರಿಂದ ಎಲ್ಲಾ ರೈತ ಬಾಂಧವರು ತಮ್ಮ ತಾಕಿಗೆ ಭೇಟಿ ನೀಡುವ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳಿಗೆ ಸಮೀಕ್ಷೆ ನಡೆಸಲು ಸಹಕರಿಸುವಂತೆ ಮನವಿ ಮಾಡಲಾಗಿದೆ.

## ಶ್ರೀ ಅಮರಗಿರಿ ರಂಗನಾಥ ಪ್ರೌಢಶಾಲೆಯ ಹಳೆ ವಿದ್ಯಾರ್ಥಿಗಳಿಂದ ಗುರು ವಂದನ- ಸ್ನೇಹ ಸಂಗಮ

# ಗುರು ಶಿಷ್ಯರ ಸಂಬಂಧ ಎಂದಿಗೂ ಕೊನೆಗೊಳ್ಳದ ಬಾಂಧವ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿಯ ಚಿಕ್ಕೋನಹಳ್ಳಿ ಗೇಟ್‌ನಲ್ಲಿರುವ ಜಿಂಗಲ್ ಬೆಲ್ ಸ್ಕೂಲ್ ಆವರಣದಲ್ಲಿ ಶ್ರೀ ಅಮರಗಿರಿ ರಂಗನಾಥ ಪ್ರೌಢಶಾಲೆಯ ಹಳೆ ವಿದ್ಯಾರ್ಥಿಗಳಿಂದ ಗುರು ವಂದನ ಮತ್ತು ಸ್ನೇಹ ಸಂಗಮ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಹಳೆ ವಿದ್ಯಾರ್ಥಿಗಳಿಂದ ಗುರು ವಂದನೆ ಸ್ವೀಕರಿಸಿ ಮಾತನಾಡಿದ ಶ್ರೀ ಅಮರಗಿರಿ ರಂಗನಾಥ ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಎಸ್.ಡಿ.ಪರಮಶಿವಯ್ಯ ಅವರು, ಗುರು ಶಿಷ್ಯರ ಸಂಬಂಧ ಎಂದಿಗೂ ಕೊನೆಗೊಳ್ಳುವ ಬಾಂಧವ್ಯವಲ್ಲ, ಅದೊಂದು ಪವಿತ್ರವಾದ ಸಂಬಂಧವಾಗಿದೆ. ಆಧುನಿಕ ಕಾಲಘಟ್ಟದಲ್ಲಿ ಆಧುನಿಕತೆ ಬೆಳೆದಂತೆ ಎಲ್ಲವೂ ಬದಲಾಗುತ್ತಿದೆ. ಆದರೆ ಇವತ್ತಿನ ಇಂತಹ ಪರಿಸ್ಥಿತಿಯಲ್ಲಿ ಕಳೆದ 25 ವರ್ಷಗಳ ನಂತರ ಶಿಕ್ಷಕರು ಹಾಗೂ ಹಳೆ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸುವ ಮೂಲಕ ಗುರುವಂದನ ಮತ್ತು ಸ್ನೇಹ ಸಂಗಮ ಕಾರ್ಯಕ್ರಮವನ್ನು ಆಯೋಜಿಸುವುದು ಖುಷಿ ತರಿಸಿದೆ. ಈ ಕಾರ್ಯಕ್ರಮ ಬೇರೆಯವರಿಗೂ ಪ್ರೇರಣೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಹೇಳಿದರು.

ನಿವೃತ್ತ ಶಿಕ್ಷಕ ವಿ.ಎನ್.ಶೇಷಮೂರ್ತಿ ಮಾತನಾಡಿ, ಶಾಲೆಯ 1990- 2000 ನೇ ಸಾಲಿನ ಹಳೆಯ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ಅವತ್ತಿನ ಕಾಲದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇತ್ತು, ಗ್ರಾಮೀಣ ಪ್ರದೇಶದಲ್ಲಿ ಬಡತನವಿದ್ದರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಲೆಂದು ಜನರು ಕೂಲಿ ಮಾಡಿ ಓದಿಸುತ್ತಿದ್ದರು. ಇನ್ನು ಅನೇಕ ವಿದ್ಯಾರ್ಥಿಗಳು 8 ರಿಂದ 10 ಕಿ.ಮೀ ಕಿಲೋಮೀಟರ್ ದೂರದಿಂದ ಶಾಲೆಗೆ ಆರ್ಥಿಕವಾಗಿ ಚೆನ್ನಾಗಿರುವ ವಿದ್ಯಾರ್ಥಿಗಳು ಸೈಕಲ್‌ನಲ್ಲಿ ಬರುತ್ತಿದ್ದರು. ಇನ್ನೂ ಕೆಲವರು ನಡೆದುಕೊಂಡು ಬರುತ್ತಿದ್ದರು, ಶಾಲೆಯಲ್ಲೂ ಕೂಡ ಶಿಕ್ಷಕರಿಗೆ ಹೆಚ್ಚಿನ ಗೌರವ ಕೊಡುವ ಮೂಲಕ ಓದಿನ ಕಡೆ ಹೆಚ್ಚು ಕಾಳಜಿ ವಹಿಸುತ್ತಿದ್ದರು. ಅವರ ಈ ಪರಿಶ್ರಮದಿಂದಲೇ ಈಗ ವಿವಿಧ ರಂಗಗಳಲ್ಲಿ ಹೆಚ್ಚು ಹೆಸರು ಮಾಡಲು ಸಾಧ್ಯವಾಗಿದೆ ಎಂದರು.



ನಿವೃತ್ತ ಶಿಕ್ಷಕ ವಿ.ಮಲ್ಲಿಕಾರ್ಜುನಯ್ಯ ಮಾತನಾಡಿ, ಸದ್ಯ ಶ್ರೀ ಅಮರಗಿರಿ ರಂಗನಾಥ ಪ್ರೌಢಶಾಲೆ ಅನೇಕ ವರ್ಷಗಳಿಂದ ವಿದ್ಯಾರ್ಥಿಗಳ ಕೊರತೆಯಿಂದ ಶಾಲೆಯನ್ನು ಮುಚ್ಚಲಾಗಿದ್ದು, ಈ ಬಗ್ಗೆ ಶಾಲೆಯನ್ನು ಪುನರ್ ಪ್ರಾರಂಭಿಸಲು ಎಲ್ಲಾ ಹಳೇ ವಿದ್ಯಾರ್ಥಿಗಳು ಒಗ್ಗೂಡಿ ಶ್ರಮಿಸಿದರೆ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಬಗ್ಗೆ ಎಲ್ಲರೂ ಚಿಂತಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

**ವಿಭಿನ್ನ ಕಾರ್ಯಕ್ರಮ ಆಯೋಜನೆ** : ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಪ್ರತಿ ಶಿಕ್ಷಕರನ್ನು ಮಾತನಾಡಿಸಿ ಅವರ ಸಲಹೆ ಮಾರ್ಗದರ್ಶನದ ಜೊತೆಗೆ ನಿವೃತ್ತಿಯ ಜೀವನದ ನಂತರ ಅವರು ಯಾವ ರೀತಿ ಜೀವನ ಸಾಗಿಸುತ್ತಿದ್ದಾರೆ. ಜೊತೆಗೆ ಮುಂಬರುವ ದಿನಗಳಲ್ಲಿ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವ ಕುರಿತು ಮಾಹಿತಿ ಪಡೆಯಲಾಯಿತು. ನಂತರ ಶಿಕ್ಷಕರಾದ ಎಚ್.ಎಂ. ಪರಮಶಿವಯ್ಯ, ವಿ.ಎನ್. ಶೇಷ ಮೂರ್ತಿ, ವಿ. ಮಲ್ಲಿಕಾರ್ಜುನಯ್ಯ, ಟಿ.ಬಿ .ಲಿಂಗದೇವರು, ಎಂ.ಹೆಚ್.ಬೋರೇಗೌಡ, ವೈ.ಎನ್.ಮಲ್ಲೇಶ್, ಎನ್.ಎಸ್. ಸಣ್ಣನಂಜಪ್ಪ, ಎನ್‌ಸಿ ರುದ್ರಚಾರ್, ನಾಗರಾಜು, ಮೂರ್ತಿ ಅವರನ್ನು ಹಳೆ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಶಾಲೆಯಿಂದ ವೇದಿಕೆ ಕಾರ್ಯಕ್ರಮದವರೆಗೂ ವೀರಗಾಸೆ ಕುಣಿತದೊಂದಿಗೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಬರಮಾಡಿಕೊಳ್ಳಲಾಯಿತು.

ಇದೇ ಸಂದರ್ಭದಲ್ಲಿ ಕೆಲವು ಹಳೆ ವಿದ್ಯಾರ್ಥಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನಂತರ ಸವಿ ನೆನಪಿಗಾಗಿ ನೆನಪಿನ ಕಾಣಿಕೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಿಂಗಲ್ ಬೇಲ್ ಶಿಕ್ಷಣ ಸಂಸ್ಥೆ ಮುಖ್ಯಸ್ಥ ಪುರದೇಗೌಡ, ಡೈರಿ ಕಾರ್ಯದರ್ಶಿ ಚಕ್ರಪಾಣಿ, ಹಳೆ ವಿದ್ಯಾರ್ಥಿಗಳಾದ ಉದ್ಯಮಿ ಅನಂತ್, ಮಧು, ಮನೋಹರ್, ಜಯಶೀಲ, ತೇಜಾವತಿ, ನಳಿನ, ವೈ.ಜಿ.ಛಾಯಾ ಮಣಿ, ಎಚ್. ಆರ್.ಕುಮಾರಸ್ವಾಮಿ, ಎಚ್.ಎ. ರವೀಂದ್ರ, ಸೇರಿದಂತೆ 1999-2000ನೇ ಸಾಲಿನ ಎಲ್ಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ಪಟ್ಟಣ ಪಂಚಾಯಿತಿ ಕಾರ್ಯಾಲಯ**
**ಆಲೂರು- 573213 (ಹಾಸನ ಜಿಲ್ಲೆ) ಫೋ.ನಂ. 200246**
Email: townpanchayath.alur@gmail.com
ನಂ.ಮುನಿಸಿ ಪ್ರಕಟಣೆ/ 2025-26 ದಿನಾಂಕ: 22/08/2025

**ಮಣ್ಣಿನ ಗಣಪತಿಯನ್ನೇ ಬಳಸಿ**

**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಆಲೂರು ಪಟ್ಟಣ ಪಂಚಾಯಿತಿಯ ಎಲ್ಲಾ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಗೌರಿ-ಗಣೇಶ ಹಬ್ಬವನ್ನು ಆಚರಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1. ಗೌರಿ ಗಣೇಶ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಬಣ್ಣರಹಿತ ಮಣ್ಣಿನ ಅಥವಾ ಇತರೆ ಪರಿಸರ ಸ್ನೇಹಿ ಗಣೇಶ ಮೂರ್ತಿಗಳೊಂದಿಗೆ ಆಚರಿಸಿ ತದ ನಂತರ ಆಲೂರು ಪಟ್ಟಣ ಪಂಚಾಯಿತಿ ನಿಗದಿಪಡಿಸಿದ ಸ್ಥಳಗಳಲ್ಲಿಯೇ ಮೂರ್ತಿಗಳನ್ನು ವಿಸರ್ಜಿಸುವುದು.
2. ಆಲೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಪಿ.ಒ.ಪಿ. ಗೌರಿ ಗಣೇಶ ಮೂರ್ತಿಗಳ ತಯಾರಿಕೆ ಮತ್ತು ಮಾರಾಟ ಮಾಡುವವರ ಮಾಹಿತಿ ನೀಡಲು/ ದೂರು ನೀಡಲು 08170-200246 ಮತ್ತು 9844158823, 6363285921 ನಂಬರ್‌ಗಳಿಗೆ ಸಂಪರ್ಕಿಸುವುದು.
3. ಆಲೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕ ಗಣೇಶ ಪೆಂಡಾಲ್‌ಗಳಲ್ಲಿ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳಾದ ಬಲೂನ್‌ಗಳಿಗೆ ಬಳಸುವ ಪ್ಲಾಸ್ಟಿಕ್ ಸ್ಟಿಕ್‌ಗಳು, ಪ್ಲಾಸ್ಟಿಕ್ ಕ್ಯಾಂಡಿ ಸ್ಟಿಕ್‌ಗಳು, ಪ್ಲಾಸ್ಟಿಕ್ ಐಸ್‌ಕ್ರೀಮ್ ಸ್ಟಿಕ್‌ಗಳು, ಅಲಂಕಾರಕ್ಕಾಗಿ ಥರ್ಮೋಕೋಲ್‌ಗಳನ್ನು ಬಳಸದಂತೆ ನಿಗಾ ವಹಿಸುವುದು.
4. ಭಾರಲೋಹ ಮಿಶ್ರಿತ ರಾಸಾಯನಿಕ ಯುಕ್ತ ಬಣ್ಣದಿಂದ ಅಲಂಕೃತಗೊಂಡಂತಹ ಯಾವುದೇ ರೀತಿಯ ಇತರೆ ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ತಯಾರಾದ ವಿಗ್ರಹಗಳ ಉತ್ಪಾದನೆ ಮಾರಾಟ ಮತ್ತು ಯಾವುದೇ ನೀರಿನ ಮೂಲಗಳಲ್ಲಿ ವಿಸರ್ಜಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.
5. ಮೇಲ್ಕಂಡ ಮಾರ್ಗಸೂಚಿಗಳನ್ನು ಉಲ್ಲಂಘಿಸುವವರ ವಿರುದ್ಧ ಶಿಸ್ತಿನ/ ಕಾನೂನು ಕ್ರಮ ಜರುಗಿಸಲಾಗುವುದು.
6. ಗಣಪತಿ ಪ್ರತಿಷ್ಠಾಪನಾ ಮಾಡುವ ಮುನ್ನ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು. ಇಲ್ಲದಿದ್ದಲ್ಲಿ ಸರ್ಕಾರಿ ಸುತ್ತೋಲೆ ಅನ್ವಯ ಕ್ರಮ ವಹಿಸಲಾಗುವುದು.

**''ಪರಿಸರ ಉಳಿಸಿ ಪರಿಸರ ಸ್ನೇಹಿ ಗಣಪತಿ ಬಳಸಿ''**

# ಗದ್ದಲದಲ್ಲೇ ಸಂಸತ್ ಅಧಿವೇಶನ ಮುಕ್ತಾಯ

» ಮೊದಲನೇ ಪುಟದಿಂದ

ಮಸೂದೆ, ಮಣಿಪುರ ವಿನಿಯೋಗ (ಸಂ.2) ಮಸೂದೆ, ವ್ಯಾಪಾರಿ ಸಾಗಣೆ ಮಸೂದೆ ಮತ್ತು ಗೋವಾ ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಮರು ಹೊಂದಾಣಿಕೆ ಮಸೂದೆ, ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆ, ರಾಷ್ಟ್ರೀಯ ಡೋಪಿಂಗ್ ವಿರೋಧಿ (ತಿದ್ದುಪಡಿ) ಮಸೂದೆ, ಆದಾಯ ತೆರಿಗೆ ಮಸೂದೆ, ತೆರಿಗೆ ಕಾನೂನು ಗಳು(ತಿದ್ದುಪಡಿ) ಮಸೂದೆ, ಭಾರತೀಯ ಬಂದರು ಮಸೂದೆ, ಗಣಿ ಮತ್ತು ಖನಿಜ ಗಳು(ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ, ಭಾರತೀಯ ನಿರ್ವಹಣಾ ಸಂಸ್ಥೆಗಳ (ತಿದ್ದುಪಡಿ) ಮಸೂದೆ ಮತ್ತು ಆನ್‌ಲೈನ್ ಗೇಮಿಂಗ್ ನ ಪ್ರಚಾರ ಮತ್ತು ನಿಯಂತ್ರಣ ಮಸೂದೆ.

**ಸಭ್ಯತೆಯ ಪಾಠ ಹೇಳಿದ ಸ್ಪೀಕರ್**

ದೇಶ ನಮ್ಮ ನಡವಳಿಕೆಗಳನ್ನು ಗಮನಿಸುತ್ತದೆ. ಜನ ನಮ್ಮ ಮೇಲೆ ಬಹಳಷ್ಟು ನಿರೀಕ್ಷೆಯಿಟ್ಟು ಆಯ್ಕೆ ಮಾಡಿ ಕಳುಹಿಸಿರುತ್ತಾರೆ. ಹಾಗಾಗಿ ನಾವು ಗೌರವಯುತ ಚರ್ಚೆ ನಡೆಸಬೇಕು. ಆದರೆ, ಕೆಲ ದಿನಗಳಿಂದ ಸದನ ಸರಿಯಾಗಿ ನಡೆಯುತ್ತಿಲ್ಲ. ಗದ್ದಲದಿಂದಲೇ ಕೂಡಿ ರುತ್ತದೆ. ಇದು ನಮ್ಮ ಸಂಸತ್ತಿನ ಸಂಪ್ರದಾಯವೂ ಅಲ್ಲ. ಈ ಅಧಿವೇಶನದಲ್ಲಿ ಬಳಸಿದ ಭಾಷೆ, ಘೋಷಣೆಗಳನ್ನು ಎತ್ತುವ ರೀತಿ, ಅದು ಸಭ್ಯತೆಯೂ ಅಲ್ಲ. ಇನ್ನು ಮುಂದಾದರೂ ಘೋಷಣೆ, ಪ್ರತಿಭಟನೆಗಳನ್ನು ತಪ್ಪಿಸಿ ಗೌರವಯುತ ಚರ್ಚೆ ನಡೆಸಬೇಕೆಂದು ಬಯಸುತ್ತೇನೆ ಎಂಬುದಾಗಿ ಜನಪ್ರತಿನಿಧಿಗಳಿಗೆ ಕಿವಿಮಾತು ಹೇಳಿದರು.

ಅಧಿವೇಶನದ ವಿವರ ಮಂಡಿಸಿದ ಸ್ಪೀಕರ್ ಓಂ ಬಿರ್ಲಾ, ಒಟ್ಟು 14 ಸರ್ಕಾರಿ ಮಸೂದೆಗಳನ್ನು ಮಂಡಿಸಲಾಗಿದ್ದು, ಅವುಗಳಲ್ಲಿ 12 ಮಸೂದೆ ಗಳನ್ನು ಅಂಗೀಕರಿಸಲಾಗಿದೆ. ಜುಲೈ 28 ಮತ್ತು 29 ರಂದು ವಿಶೇಷ ಚರ್ಚೆ ಗಳು ನಡೆದವು, ಇದು ಪ್ರಧಾನ ಮಂತ್ರಿ ಅವರ ಉತ್ತರದೊಂದಿಗೆ ಮುಕ್ತಾ ಯವಾಯಿತು. ಆ.18ರಂದು ಬಾಹ್ಯಾಕಾಶ ಕಾರ್ಯಕ್ರಮದ ಸಾಧನೆಗಳ ಕುರಿತು ವಿಶೇಷ ಚರ್ಚೆಯನ್ನೂ ಸಹ ನಡೆಸಲಾಯಿತು ಎಂದು ತಿಳಿಸಿದರು.

# ಕೊಣನೂರು-ಕಟ್ಟೇಪುರ ನಡುವೆ ಸೇತುವೆ ನಿರ್ಮಿಸಿ

• ಪ್ರಜೋದಯ ವರದಿ

**ಹಾಸನ:** ಅರಕಲಗೂಡು ತಾಲ್ಲೂಕು ಕೊಣನೂರು-ಕಟ್ಟೇಪುರ ನಡುವೆ ಸಂಪರ್ಕ ಸೇತುವೆ ಇಲ್ಲದೆ ಸುತ್ತಮುತ್ತಲಿನ ಗ್ರಾಮಸ್ಥರು ಸಂಕಷ್ಟ ಎದುರಿಸುತ್ತಿದ್ದಾರೆ. ಲೋಕೋಪಯೋಗಿ ಇಲಾಖೆ ಸೇತುವೆ ನಿರ್ಮಾಣಕ್ಕೆ ಮುಂದಾಗಬೇಕೆಂದು ಶಾಸಕ ಎ.ಮಂಜು ಅವರು ಒತ್ತಾಯಿಸಿದರು.



ಅಧಿವೇಶನದಲ್ಲಿ ಮಾತನಾಡಿದ ಅವರು, ಕಾವೇರಿ ನದಿಗೆ 2 ಕಿ.ಮೀ. ಸಂಪರ್ಕ ಸೇತುವೆ ನಿರ್ಮಾಣವಾದರೆ ಹಾಸನ, ಮೈಸೂರು ಜಿಲ್ಲೆಗಳ ಸುಮಾರು 40 ಹಳ್ಳಿಗಳಿಗೆ ನೇರ ಸಂಪರ್ಕ ಲಭಿಸು ವುದರ ಜೊತೆಗೆ ಗ್ರಾಮಸ್ಥರಿಗೆ ಆಸ್ಪತ್ರೆ ಹಾಗು ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಸುಲಭ ಸಂಚಾರ ಸಿಗಲಿದೆ. ಜನರ ಸೌಕರ್ಯಕ್ಕಾಗಿ ಹೊಸ ಸೇತುವೆ ನಿರ್ಮಾಣವಾಗುವುದು ಖಚಿತ ಎಂದು ಗಮನ ಸೆಳೆದರು.

ಸೇತುವೆ ನಿರ್ಮಾಣ ಕಾಮಗಾರಿಗೆ 30 ರಿಂದ 32 ಕೋಟಿ ರೂ. ವೆಚ್ಚವಾಗಬಹು ದೆಂದು ಅಂದಾಜಿಸಲಾಗಿದೆ. ಲೋಕೋ ಪಯೋಗಿ ಸಚಿವರು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಅನುದಾನ ಕೊಡಿ ಸಲು ಪ್ರಯತ್ನಪಟ್ಟು 20 ಕೋಟಿ ರೂ. ಅನುದಾನದ ಪ್ರಸ್ತಾವನೆ ಸಲ್ಲಿಸಿದ್ದಾರೆ. ಆ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಹೋಗಿದೆ. ಒಂದೇ ಬಾರಿಗೆ ಸಂಪೂರ್ಣ ಅನುದಾನ ಒದಗಿ ಸಲು ಸಾಧ್ಯವಾಗದಿದ್ದರೆ, ಸದ್ಯಕ್ಕೆ 20 ಕೋಟಿ ರೂ. ತಕ್ಷಣ ಮಂಜೂರು ಮಾಡಿ, ಉಳಿದ ಹಣವನ್ನು ಮುಂದಿನ ದಿನಗಳಲ್ಲಿ ನೀಡಬೇಕೆಂದು ಮನವಿ ಮಾಡಿದರು. ಲೋಕೋಪಯೋಗಿ ಸಚಿವರ ಪರವಾಗಿ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ್ ಅವರು ಉತ್ತರಿಸಿ, ಸಮಸ್ಯೆಯ ಗಂಭೀರತೆಯನ್ನು ಅರಿತು ಸಚಿವರ ಗಮನಕ್ಕೆ ತಂದು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ, ಸದಸ್ಯರು ಕೇಳಿರುವಂತೆ ಹಂತ ಹಂತವಾಗಿ ಹಣ ಬಿಡುಗಡೆಗೆ ಪ್ರಮಾಣಿಕ ಪ್ರಯತ್ನ ಮಾಡ ಲಾಗುವುದೆಂದು ಭರವಸೆ ನೀಡಿದರು.

## ಪಾರಂಪರಿಕ ತಾಣ ಅಭಿವೃದ್ಧಿಗೆ ವಿಧೇಯಕ ಅಂಗೀಕರಿಸಿ

ಹಾಸನ: ವಿಶ್ವ ಪಾರಂಪರಿಕ ತಾಣಗಳ ಅಭಿವೃದ್ಧಿ, ಸಂರಕ್ಷಣೆ ಹಾಗು ಪ್ರವಾಸೋದ್ಯಮದ ಉತ್ತೇಜನಕ್ಕಾಗಿ ಹಿಂದಿನ ಅಧಿವೇಶನದಲ್ಲಿ ಮಂಡಿಸಿದ್ದ ಬೇಲೂರು-ಹಳೇಬೀಡು ವಿಶ್ವ ಪಾರಂ ಪರಿಕ ತಾಣ ನಿರ್ವಹಣಾ ಪ್ರಾಧಿಕಾರ ಖಾಸಗಿ ವಿಧೇಯಕವನ್ನು ಅಂಗೀಕರಿಸಿ, ಶೀಘ್ರವೇ ಪ್ರಾಧಿಕಾರ ರಚಿಸುವಂತೆ ಶಾಸಕ ಹೆಚ್.ಕೆ.ಸುರೇಶ್ ಅವರು ಸರ್ಕಾರವನ್ನು ಒತ್ತಾಯಿಸಿದರು. 2023ರ ನಂತರ ಕಳೆದ ಆರು ಸದನಗಳಲ್ಲೂ ವಿಶ್ವವಿಖ್ಯಾತ ಬೇಲೂರು ಹಾಗು ಹಳೇಬೀಡು ಪ್ರಾಧಿಕಾರ ರಚನೆ ಮಾಡಬೇಕೆಂದು ಬೆಳಗಾವಿ ಅಧಿವೇಶದಲ್ಲಿ ಖಾಸಗಿ ವಿಧೇಯಕ ಮಂಡನೆಗೆ ಸಿದ್ಧತೆ ಮಾಡಿಕೊಂಡರೂ ಸಾಧ್ಯವಾಗಲಿಲ್ಲ. ನಂತರದ ಅಧಿವೇಶದನಲ್ಲಿ ಅವಕಾಶ ನೀಡಲಾ ಯಿತು. 908 ವರ್ಷಗಳ ಇತಿಹಾಸವಿರುವ ಬೇಲೂರು, ಹಳೇಬೀಡು ಶಿಲ್ಪಕಲೆ ವೀಕ್ಷಣೆಗೆ ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಯಾವುದೇ ಮೂಲಭೂತ ಸೌಲಭ್ಯಗಳಿಲ್ಲ. ಸಾರಿಗೆ ವ್ಯವಸ್ಥೆ ಇಲ್ಲ, ಬಸ್ ನಿಲ್ದಾಣ, ಶೌಚಾಲಯಗಳ ವ್ಯವಸ್ಥೆ ಇಲ್ಲ. ಈ ಬಗ್ಗೆ ಕೇಳಿದ ಪ್ರಶ್ನೆಗೆ ಸಂಬಂಧಪಟ್ಟ ಸಚಿವರು ಸರಿಯಾದ ಉತ್ತರ ನೀಡಿಲ್ಲ ಎಂದು ಆರೋಪಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಚಿವ ಶರಣ ಪ್ರಕಾಶ ಪಾಟೀಲ್ ಅವರು, ಶಾಸಕರು ಮಂಡಿಸಿರುವ ಖಾಸಗಿ ವಿಧೇಯಕದ ಬಗ್ಗೆ ಆರ್ಥಿಕ ಸಾಧಕ-ಬಾಧಕಗಳನ್ನು ಪರಿಶೀಲನೆ ಮಾಡಿ, ಆ ಬಗ್ಗೆ ನಿರ್ಣಯ ಕೈಗೊಳ್ಳುವುದಾಗಿ ಪ್ರವಾಸೋದ್ಯಮ ಸಚಿವರು ತಿಳಿಸಿದ್ದಾರೆ. ಯಾವುದೇ ಬೇಡಿಕೆ ಯನ್ನು ತಿರಸ್ಕಾರ ಮಾಡಿಲ್ಲ, ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ. ಶಾಸಕರ ಕಳಕಳಿಯನ್ನು ಸಚಿವರ ಗಮನಕ್ಕೆ ತರುತ್ತೇನೆಂದು ಉತ್ತರಿಸಿದರು.

# ಪಾಲಿಕೆಗೆ ಅನುದಾನ ನೀಡದೆ ಅನ್ಯಾಯ: ಸ್ವರೂಪ್

## ಪ್ರತಿಪಕ್ಷ ಶಾಸಕರಿಗೂ ಅನುದಾನ ಬಿಡುಗಡೆಗೆ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಹಾಸನ ನಗರಸಭೆಯನ್ನು ಮಹಾ ನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸಿರುವ ರಾಜ್ಯ ಸರ್ಕಾರ, ಅದಕ್ಕೆ ಪೂರಕವಾಗಿ 2025-26ನೇ ಬಜೆಟ್‌ನಲ್ಲಿ ಮೀಸಲಿಟ್ಟ ಅನುದಾನ ವನ್ನು ನೀಡದೆ ಅನ್ಯಾಯ ಮಾಡಿದೆ. ಸರ್ಕಾರ ಆರ್ಥಿಕ ಇಲಾಖೆ ಮೂಲಕ ಮುಂದಿನ 3 ವರ್ಷ ಹೆಚ್ಚುವರಿ ಅನುದಾನ ಮತ್ತು ಹುದ್ದೆ ಯನ್ನು ನೀಡುವುದಿಲ್ಲವೆಂಬ ಆದೇಶ ಹೊರಡಿ ಸಿದೆ ಎಂದು ಸದನದಲ್ಲಿ ಶಾಸಕ ಹೆಚ್.ಪಿ. ಸ್ವರೂಪ್ ಅವರು ಅಸಮಾಧಾನ ವ್ಯಕ್ತಪಡಿಸಿದರು.



ಮಹಾನಗರ ಪಾಲಿಕೆಗಾಗಿ ಹಾಸನದ ಸುತ್ತಮುತ್ತಲ 37 ಹಳ್ಳಿಗಳನ್ನು ನಗರಸಭೆಗೆ ಸೇರಿಸಿ ಕೊಳ್ಳಲಾಗಿದೆ. ಅವರಿಗೆ ನೀಡಬೇಕಾಗಿರುವ ಸೌಲಭ್ಯಗಳಲ್ಲಿ ವಂಚನೆ ಮಾಡಿದಂತಾಗಿದೆ. ಕಳೆದ ಅಧಿವೇಶನದಲ್ಲಿ ಹಾಸನ ನಗರಸಭೆಯನ್ನು ಮಹಾ ನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿಸಿದ್ದು ಸಂತೋಷದ ವಿಚಾರ, ಅದಕ್ಕೆ ನಾವೂ ಕೂಡ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿ ದ್ದೆವು. ಆದರೆ, ಕೇವಲ ನಾಮ್ ಕೇ ವಾಸ್ತೆಗೆ ಮೇಲ್ದರ್ಜೆಗೇರಿಸಿ ಅನುದಾನ ನೀಡದೆ ಇದ್ದರೆ ಕೆಲಸ ಮಾಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಈ ಹಿಂದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿದ್ದ ಗ್ರಾಮ ಗಳು ಇದೀಗ ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿವೆ. ಅದಕ್ಕೆ ಅನುಗುಣವಾಗಿ ಅವರು ಕೂಡ ಹತ್ತು ಪಟ್ಟು ಹೆಚ್ಚು ಕಂದಾಯ ಕಟ್ಟುತ್ತಿದ್ದಾರೆ. ಆ ಗ್ರಾಮಗಳನ್ನು ಮಹಾನಗರ ಪಾಲಿಕೆ ಹಂತದಲ್ಲಿ ಅಭಿವೃದ್ಧಿ ಪಡಿಸಲು ಆಗುತ್ತಿಲ್ಲ. ಈ ಹಿಂದೆ ಸರ್ಕಾರ ಅನುದಾನ ನೀಡುವ ಭರವಸೆ ನೀಡಿ ಇದೀಗ ಪೌರಾ ಡಳಿತ ಇಲಾಖೆ, ಮುಂದಿನ ಮೂರು ವರ್ಷ ಯಾವುದೇ ನೇಮಕಾತಿ ಅಥವಾ ಹಣ ಬಿಡುಗಡೆ ಮಾಡಲು ಆಗುವುದಿಲ್ಲ ಎಂಬ ಪತ್ರ ಹೊರಡಿಸಿದೆ. ಹೀಗಾದರೆ ಅಭಿ ವೃದ್ಧಿ ಹೇಗೆ, ಇದ ರಿಂದ ನಮಗೆ ತುಂಬಾ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈಗಾಗಲೇ ಹಾಸನ ನಗರ ಸೇರಿ ಜಿಲ್ಲೆಯಾದ್ಯಂತ ಭಾರೀ ಮಳೆ ಆಗುತ್ತಿದ್ದು, ರಸ್ತೆಗಳು ಗುಂಡಿ ಮಯವಾಗಿದೆ. ಅವುಗ ಳನ್ನು ಮುಚ್ಚಲು ಹಣವಿಲ್ಲದೆ ಪರದಾಡುವಂತಾಗಿದೆ, ಕೆಲವರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಶಾಸಕರು ಏನು ಮಾಡುತ್ತಿದ್ದಾರೆಂಬ ಪ್ರಶ್ನೆ ಹಾಕುತ್ತಿದ್ದು, ನಮ್ಮ ಕ್ಷೇತ್ರಕ್ಕೆ ಹೋಗಿ ಕೆಲಸ ಮಾಡಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಮಸ್ಯೆ ವಿವರಿಸಿದ ಅವರು, ಅದನ್ನು ಮನಗಂಡು ಮುಖ್ಯಮಂತ್ರಿಗಳು ಹಾಗೂ ಸಂಬಂಧಿಸಿದ ಸಚಿವರು ಹೆಚ್ಚಿನ ಅನುದಾನ ನೀಡಿ ಹೊಸದಾಗಿ ಶಾಸಕರಾಗಿರುವ ನಮಗೆ ಹೆಚ್ಚಿನ ಕೆಲಸ ಮಾಡಲು ಪ್ರೋತ್ಸಾಹ ನೀಡಬೇಕೆಂದು ಮನವಿ ಮಾಡಿದರು.

ಸರ್ಕಾರ ಆಡಳಿತ ಪಕ್ಷದ ಸದಸ್ಯರಿಗೆ 50 ಕೋಟಿ ರೂ. ಅನುದಾನ ನೀಡಿ, ನಮಗೆ ಯಾವುದೇ ಅನುದಾನ ನೀಡಿಲ್ಲ. ಹೀಗಾಗಿ ಜನರು ಏನು ಕೆಲಸ ಮಾಡಿದ್ದೀರಾ ಎಂದು ಪ್ರಶ್ನೆ ಮಾಡಿದರೂ ಉತ್ತರಿಸಲು ಸಾಧ್ಯವಾಗುತ್ತಿಲ್ಲ. ಮೊದಲ ಬಾರಿಗೆ ಗೆದ್ದು ಉತ್ಸಾಹದಿಂದ ಕೆಲಸ ಮಾಡಲು ಬಂದಿದ್ದೇವು. ಅನು ದಾನ ನೀಡದೆ ಇರುವುದರಿಂದ ಬೇಸರ ತರಿಸಿದೆ. ಮುಖ್ಯ ಮಂತ್ರಿ, ಉಪ ಮುಖ್ಯಮಂತ್ರಿ ಹಾಸನಕ್ಕೆ ಬಂದು ಸಾಧನ ಸಮಾವೇಶ ಮಾಡಿದರೂ ಹಾಸನ ಮಹಾನಗರ ಪಾಲಿಕೆಗೆ ಅನುದಾನ ನೀಡಲ್ಲ. ಹಾಸನ ಕ್ಷೇತ್ರಕ್ಕೆ ಅನ್ಯಾಯ ವಾಗಿದೆ. ನಾವು ಮೊದಲ ಬಾರಿಗೆ ಆಯ್ಕೆಯಾಗಿ ಬಂದಿದ್ದೇವೆ. ಮುಖ್ಯ ಮಂತ್ರಿ ವಿಶಾಲ ಮನಸ್ಸಿನಿಂದ ಹೆಚ್ಚಿನ ಅನುದಾನ ನೀಡ ಬೇಕೆಂದು ಮನವಿ ಮಾಡಿದರು.

# ಸೆಕ್ಷನ್-4: ಸರ್ವೆಗೂ ಮೊದಲು ಯಾವುದೇ ಕ್ರಮ ಕೈಗೊಳ್ಳದಿರಿ

• ಪ್ರಜೋದಯ ವರದಿ

**ಹಾಸನ:** ಮಲೆನಾಡು ಭಾಗದ ಸೆಕ್ಷನ್ -4ಗೆ ಸಂಬಂಧಿಸಿಂತೆ ಜಂಟಿ ಸರ್ವೆ ಕಾರ್ಯ ನಡೆಯು ವವರೆಗೂ ಯಾವುದೇ ರೀತಿಯ ತೆರವು ಕಾರ್ಯ ನಡೆಸದಂತೆ ಒತ್ತಾಯಿಸಿ ಕರ್ನಾಟಕ ಬೆಳೆಗಾರರ ಒಕ್ಕೂಟ, ಜಿಲ್ಲಾ ಪ್ಲಾಂಟರ್ಸ್ ಸಂಘದ ನಿಯೋಗ ಸಿಸಿಎಫ್ ಏಡು ಕೊಂಡಲು ಹಾಗು ಡಿಸಿಎಫ್ ಸೌರಭ್ ಕುಮಾರ್ ಅವರಿಗೆ ಮನವಿ ಸಲ್ಲಿಸಿತು.



ನಗರದ ಅರಣ್ಯ ಭವನದಲ್ಲಿ ಅಧಿ ಕಾರಿಗಳನ್ನು ಭೇಟಿ ಮಾಡಿದ ಬೆಳೆಗಾ ರರ ಸಂಘದ ಪದಾಧಿಕಾ ರಿಗಳು, ಸೆಕ್ಷನ್-4ಗೆ ಒಳ ಪಡುವ ಭೂ ಪ್ರದೇಶ ವನ್ನು ಸರ್ವೆ ಕಾರ್ಯ ನಡೆಸುವಾಗ ಸುತ್ತೋಲೆಯಲ್ಲಿರುವಂತೆ ಸೂಚನೆ ಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಪದಾಧಿ ಕಾರಿಗಳು, ಸಕಲೇಶಪುರ ತಾಲ್ಲೂಕಿನ ಮಲೆನಾಡಿನ ಭಾಗ ಗಳಲ್ಲಿ ಸೆಕ್ಷನ್-4 ಅಧಿಸೂಚನೆ ಹಾಗು ಡಿಮ್ಡ್ ಅರಣ್ಯ ಗಳ ಘೋಷಣೆಯಿಂದ ಈ ಭಾಗದ ರೈತರು, ಜನಸಾಮಾನ್ಯರಲ್ಲಿ ಗೊಂದ ಲದ ವಾತಾವರಣ ಸೃಷ್ಟಿಯಾಗಿದೆ. ಈ ಹಿಂದೆ ಅರಣ್ಯ ಸಚಿವರು, ಕಂದಾಯ ಸಚಿವರು ಹಾಗು ಇಂಧನ ಸಚಿವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧಾ ರಿಸಿರುವಂತೆ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗಳ ಜಂಟಿ ಸಹ ಭಾಗಿತ್ವದಲ್ಲಿ ಸರ್ವೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವಂತೆ ತಿಳಿಸಿ ದ್ದರು. ಅದರಂತೆ ಜಂಟಿ ಸರ್ವೆ ಕಾರ್ಯ ನಡೆ ಸುವಂತೆ ಹಾಗು ಅಲ್ಲಿಯವರೆಗೂ ಯಾವುದೇ ಕ್ರಮ ವಹಿಸದಂತೆ ಒತ್ತಾಯಿಸಿದರು.

ಕರ್ನಾಟಕ ಬೆಳಗಾರರ ಒಕ್ಕೂಟದ ಉಪಾಧ್ಯಕ್ಷ ಬಿ.ಎಂ.ನಾಗರಾಜ್, ಪ್ರಧಾನ ಕಾರ್ಯದರ್ಶಿ ಟಿ.ಪಿ. ಸುರೇಂದ್ರ, ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ಎ.ಎಸ್. ಪರಮೇಶ್, ಗೌರವ ಕಾರ್ಯದರ್ಶಿ ಕೆ.ಬಿ. ಲೋಹಿತ್, ಕೆಜಿಎಫ್ ಸಂಘಟನಾ ಕಾರ್ಯದರ್ಶಿ ಬಿ.ಜಿ.ಯತೀಶ್, ಹೆಚ್‌ಡಿಪಿಎ ನಿರ್ದೇಶಕ ಡಿ.ಎಸ್.ಲೋಕೇಶ್, ಯಸಳೂರು ಹೋಬಳಿ ಬೆಳಗಾರರ ಸಂಘದ ಅಧ್ಯಕ್ಷ ಕೆ.ಬಿ.ಗಂಗಾಧರ್ ಹಾಜರಿದ್ದರು.

## ಎಸ್.ಆರ್.ಆನಂದ್ ನಿಧನ



**ಹಾಸನ:** ಪತ್ರಕರ್ತ ಎಸ್.ಎ.ರಘುನಂದನ್ ಅವರ ತಂದೆ ಎಸ್.ಆರ್.ಆನಂದ್ ಅವರು ಗುರುವಾರ ಬೆಳಿಗ್ಗೆ ನಿಧನರಾದರು.

ಕಳೆದ ಹಲವು ದಿನಗಳಿಂದ ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿ ದ್ದರು. ಸಂಜೆ 5 ಗಂಟೆ ನಂತರ ನಗರದ ಬಿಟ್ಟಗೋಡನಹಳ್ಳಿಯಲ್ಲಿ ಅಂತ್ಯ ಕ್ರಿಯೆ ನೆರವೇರಿತು. ಹಿಂದೆ ಲಾಟರಿ ಏಜೆನ್ಸಿ ನಡೆಸು ತ್ತಿದ್ದ ಆನಂದ್ ಅವರು, ಕೆಲವು ವರ್ಷ ಹಾಸನ ಮಾಧ್ಯಮ ಪತ್ರಿಕೆಯ ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡಿದ್ದರು. ಪತ್ನಿ, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿ ಅಪಾರ ಬಂಧು ಬಳಗ ಅಗಲಿದ್ದಾರೆ.

## ಜನ್ಮ ಶತಮಾನೋತ್ಸವದಲ್ಲಿ ಬರಹಗಾರ ಕೆ.ಎಸ್.ರವಿಕುಮಾರ್ ಬಣ್ಣನೆ

# ಕ್ಯೂಬಾ ಪ್ರಗತಿಗೆ ಫಿಡೆಲ್ ಕ್ಯಾಸ್ಟ್ರೋ ಕೊಡುಗೆ ಅಪಾರ

• ಪ್ರಜೋದಯ ವರದಿ

**ಹಾಸನ:** ಕ್ಯೂಬಾ ದೇಶ ಸಾಕ್ಷರತೆ, ವೈದ್ಯಕೀಯ ಕ್ಷೇತ್ರ ಮತ್ತು ಮಾನವ ಅಭಿವೃದ್ಧಿಯಲ್ಲಿ ಜಾಗತಿಕ ಗಮನ ಸೆಳೆಯುವಂತಹ ಸಾಧನೆ ಮಾಡುವುದ ರಲ್ಲಿ ದೀರ್ಘಕಾಲ ಜನಪರ ಅಧಿಕಾರ ನಡೆಸಿದ ಫಿಡೆಲ್ ಕ್ಯಾಸ್ಟ್ರೋ ಪಾತ್ರ ಬಹಳ ಮಹತ್ತರವಾ ದದ್ದು ಎಂದು ಬರಹಗಾರ ಕೆ.ಎಸ್.ರವಿ ಕುಮಾರ್ ಅವರು ಹೇಳಿದರು.




ನಗರದ ಶ್ರಮಾ ಕಚೇರಿಯಲ್ಲಿ ಜಿಲ್ಲಾ ಕ್ಯೂಬಾ ಸೌಹಾರ್ದ ಸಮಿತಿ ಏರ್ಪಡಿಸಿದ್ದ ಕ್ಯೂಬಾ ಸೌಹಾರ್ದ ದಿನ ಮತ್ತು ಫಿಡೆಲ್ ಕ್ಯಾಸ್ಟ್ರೋ ಜನ್ಮ ಶತಮಾನೋತ್ಸವದಲ್ಲಿ ಮಾತನಾ ಡಿದ ಅವರು, ಕೃಷಿ ಪ್ರಧಾನವಾಗಿರುವ ಪುಟ್ಟ ಕ್ಯೂಬಾ ದೇಶವನ್ನು ಎಲ್ಲಾ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುವಂತೆ ಮಾಡಿದ್ದು ಫಿಡೆಲ್ ಕ್ಯಾಸ್ಟ್ರೋ ಮತ್ತು ಅಲ್ಲಿನ ಸಮಾಜವಾದಿ ವ್ಯವಸ್ಥೆ ಎಂದರು.

ಪುಟ್ಟ ದೇಶದ ಮೇಲೆ ಅಮೇರಿಕಾ ಸಾಮ್ರಾಜ್ಯ ಶಾಹಿ ಆರ್ಥಿಕ ದಿಗ್ಬಂಧನವನ್ನು ನಿರಂತರವಾಗಿ ಹೇರುತ್ತಿದ್ದರೂ, ಲಭ್ಯವಿರುವ ಅಲ್ಪ ಸಂಪನ್ಮೂಲ ದಲ್ಲಿಯೇ ದೇಶವನ್ನು ಅತ್ಯಂತ ಯಶಸ್ವಿಯಾಗಿ ಅಭಿವೃದ್ಧಿ ಪಡಿಸಿದ್ದು ಕಮ್ಯೂನಿಸ್ಟ್ ನಾಯಕ ಫಿಡೆಲ್ ಕ್ಯಾಸ್ಟ್ರೋ. ಅಮೇರಿಕಾ ದಿಗ್ಬಂಧನವನ್ನು ಹೇರಿದ ನಂತರ ಪೆಟ್ರೋಲಿಯಂ ಉತ್ಪನ್ನಗಳು ದೇಶಕ್ಕೆ ಆಮದಾಗುವುದು ನಿಂತು ಹೋಗುತ್ತದೆ. ಇಂಥಹ ಕಾಲಘಟ್ಟದಲ್ಲಿ ಕ್ಯೂಬಾ ದೇಶದ ಜನರೆ ಲ್ಲರೂ ಸೈಕಲ್ ಬಳಸಲು ಪ್ರಾರಂಭಿಸುತ್ತಾರೆ. ಅದರಿಂದ ದೇಶದ ಜನರ ಆರೋಗ್ಯ ಸುಧಾರಿ ಸುತ್ತದೆಂದು ಹೇಳಿದರು.

ಕ್ಯೂಬಾ ದೇಶದ ರೈತರು ಹೆಚ್ಚು ಕಬ್ಬು ಬೆಳೆ ಯುತ್ತಾರೆ, ವೈಜ್ಞಾನಿಕ ವಿಧಾನದಲ್ಲಿ ಸಾವಯವ ಕೃಷಿ ಮಾಡುವ ಪದ್ಧತಿಯನ್ನು ಅಳವಡಿಸಿ ಕೊಂಡು ಹೆಚ್ಚಿನ ಇಳುವರಿಯನ್ನೂ ಪಡೆಯು ತ್ತಾರೆ. ಹೆಚ್ಚು ಶಿಕ್ಷಕರು, ವೈದ್ಯರು, ಕ್ರೀಡಾ ತರಬೇತಿದಾರರು ಇದ್ದು ಅಮೇರಿಕಾದಲ್ಲೂ ಇಷ್ಟು ಸಂಖ್ಯೆ ಯಲ್ಲಿ ಇಲ್ಲದಿರುವುದನ್ನು ಕಾಣ ಬಹುದು. ಅದಕ್ಕೆ ಕ್ಯಾಸ್ಟ್ರೋ ಮತ್ತು ಅವರ ಸಂಗಾ ತಿಗಳ ದೂರ ದೃಷ್ಟಿ ಯೋಜನೆಗಳು ಪರಿಣಾಮ ಕಾರಿಯಾಗಿ ಕಾರ್ಯನಿರ್ವಹಿಸಿವೆ. ಕೊರೊನಾ ಸಂದರ್ಭ ದಲ್ಲಿ ಈ ಪುಟ್ಟ ದೇಶದಲ್ಲಿ ಐದು ರೋಗ ನಿರೋಧಕ ಲಸಿಕೆಗಳನ್ನು ಕಂಡುಹಿಡಿದು ಅತ್ಯಂತ ಕಡಿಮೆ ಅವಧಿಯಲ್ಲಿ ಇಡೀ ದೇಶದ ಜನರಿಗೆ ರೋಗ ನಿರೋಧಕ ಲಸಿಕೆ ಹಾಕಿಸಿದರು. ಆ ಮೂಲಕ ಕೊರೊನಾ ರೋಗಕ್ಕೆ ತುತ್ತಾಗುವ ದೇಶದ ಜನರನ್ನು ಸಂರಕ್ಷಿಸಿದರು ಎಂದರು.

ಸಿಐಟಿಯು ಜಿಲ್ಲಾ ಅಧ್ಯಕ್ಷ ಧರ್ಮೇಶ್ ಅವರು ಮಾತನಾಡಿ, ಕ್ಯೂಬಾ ಮತ್ತು ಕ್ಯಾಸ್ಟ್ರೋ ಜಗತ್ತಿನ ಸಮಾನತೆಯ ಆಶಾಕಿರಣಗಳಿದ್ದಂತೆ. ಇಂತಹ ಆಶಾಕಿರಣವನ್ನೇ ಇಲ್ಲವಾಗಿಸಬೇಕೆಂದು ಅಮೇರಿಕಾ ಸತತ ಪ್ರಯತ್ನಿಸಿದರೂ ಅದು ಸಾಧ್ಯವಾಗಿಲ್ಲ. ಈಗ ಟ್ರಂಪ್ ಅಧ್ಯಕ್ಷರಾದ ಮೇಲೆ ಮತ್ತಷ್ಟು ಆರ್ಥಿಕ ದಿಗ್ಬಂದನ ಹೆಚ್ಚಾಗಿದೆ ಎಂದರು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಹೆಚ್.ಆರ್. ನವೀನ್‌ಕುಮಾರ್ ಮಾತನಾಡಿ, ಕ್ಯೂಬಾ, ಕ್ಯಾಸ್ಟ್ರೋ ಮತ್ತು ಚೇ ಈ ಮೂರು ಹೆಸರು ಸಮಾ ನತೆಯ ಕನಸುಕಾಣುವವರಿಗೆ ಸ್ಫೂರ್ತಿಯ ಸೆಲೆಗಳು. ಕೇವಲ ಒಂದು ಕೋಟಿ ಜನಸಂಖ್ಯೆ ಯನ್ನು ಹೊಂದಿರುವ ಕ್ಯೂಬಾ ಭಾರತಕ್ಕಿಂತ ತಡವಾಗಿ ಅಂದರೆ 1959 ರಲ್ಲಿ ಕ್ರಾಂತಿ ಮಾಡಿ, ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿ ಜಗತ್ತಿನ 193 ರಾಷ್ಟ್ರಗಳ ಪೈಕಿ 50ನೇ ಸ್ಥಾನದಲ್ಲಿದೆ. ಆದರೆ ಭಾರತ ಮಾತ್ರ 1947 ರಲ್ಲಿ ಸ್ವತಂತ್ರವಾದರೂ 130ನೇ ಸ್ಥಾನದಲ್ಲಿದೆ. ಅಂದರೆ ಒಂದು ದೇಶದ ಅಭಿವೃದ್ಧಿ ಎಂದರೆ ಅದು ಅಲ್ಲಿಯ ಜನತೆಯ ಮಾನವಾಭಿವೃದ್ಧಿ ಇದು ಸಮಾಜವಾದಿ ಅಭಿ ವೃದ್ಧಿಯ ಮಾದರಿ ಎಂದು ಫಿಡೆಲ್ ಕ್ಯಾಸ್ಟ್ರೋ ತಮ್ಮ ಕೆಲಸದ ಮೂಲಕ ಸಾಧಿಸಿ ತೋರಿಸಿಕೊಟ್ಟಿದ್ದಾರೆಂದು ಹೇಳಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಷ್ಪ, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್, ಅಹಮದ್ ಹಗರೆ, ಹರೀಶ್ ಕಟ್ಟೆ, ಪ್ರಕಾಶ್, ಅರವಿಂದ್ ಇದ್ದರು.

## ಕ್ಯಾಸ್ಟ್ರೋ ಕೊಲ್ಲಲು 638 ಬಾರಿ ಯತ್ನ

ಜಗತ್ತಿನ ಯಾವುದೇ ಮೂಲೆಯಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ನಿರ್ಮಾಣವಾದರೂ ಅಲ್ಲಿ ಕ್ಯೂಬಾದ ವೈದ್ಯರ ತಂಡ ಸೇವೆಗೆ ಹಾಜರಿರುತ್ತದೆ. ಈ ಪುಟ್ಟ ದೇಶ ವೈಜ್ಞಾನಿಕವಾಗಿ ಕ್ರಾಂತಿಕಾರಕ ಸಂಶೋಧ ನೆಗಳನ್ನು ಕೈಗೊಳ್ಳಲು ಸಾಧ್ಯವಾಗಿದ್ದು ಫೀಡಲ್ ಕ್ಯಾಸ್ಟ್ರೋ ಮತ್ತು ಸಂಗಾತಿಗಳ ಪರಿಶ್ರಮ ಕಾರಣ. ಫಿಡೆಲ್ ಕ್ಯಾಸ್ಟ್ರೋ ಅವರನ್ನು ಅಮೇರಿಕಾ ಸರ್ಕಾರ ತನ್ನ ಸಿಐಎ ಮೂಲಕ ಕೊಲ್ಲಲು 638 ಬಾರಿ ಪ್ರಯ ತ್ನಿಸಿ ವಿಫಲವಾಯಿತು. ಕ್ಯಾಸ್ಟ್ರೋ ಒಬ್ಬ ಬಂಡಾಯ ಹೋರಾಟಗಾರ, ಜನರ ಸಮಸ್ಯೆ ಗಳ ನಿವಾರಣೆಗೆ, ಜೀವನ ಮಟ್ಟದ ಸುಧಾರಣೆಗಾಗಿ ಹೋರಾಡಿದರು ಎಂದು ರವಿಕುಮಾರ್ ಅವರು ಸ್ಮರಿಸಿದರು.

# ಚಿನ್ನದ ಸರ ದೋಚಿ ಪರಾರಿ

• ಪ್ರಜೋದಯ ವರದಿ

**ಹಾಸನ:** ರಸ್ತೆಯಲ್ಲಿ ನಡೆದು ಹೋಗು ತ್ತಿದ್ದ ಮಹಿಳೆಯ ಕುತ್ತಿಗೆಯಲ್ಲಿದ್ದ 60 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ನಗರದ ಉದಯಗಿರಿಯಲ್ಲಿ ನಡೆದಿದೆ.

ರತ್ನಮ್ಮ ಎಂಬುವವರು ಮನೆ ಸಮೀಪದ ಅಂಗಡಿಯಿಂದ ದಿನಸಿ ಸಾಮಾಗ್ರಿ ತೆಗೆದುಕೊಂಡು ಮನೆಗೆ ಬರುತ್ತಿದ್ದಾಗ ಎದುರುಗಡೆಯಿಂದ ಪಲ್ಸರ್ ಬೈಕ್‌ನಲ್ಲಿ ಬಂದ ಇಬ್ಬರು ಸಮೀಪಕ್ಕೆ ಬಂದು ಬೈಕ್ ನಿಲ್ಲಿಸಿದ್ದಾರೆ. ಹಿಂದೆ ಕುಳಿತಿದ್ದ ಅಪರಿಚಿತ ಕೊರಳಿಗೆ ಕೈ ಹಾಕಿ 4 ಲಕ್ಷ ರೂ. ಬೆಲೆ ಬಾಳುವ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಭೂ ಸುಧಾರಣಾ ಕಾಯಿದೆ ಪಿತಾಮಹಾ ದೇವರಾಜ ಅರಸು

• ಪ್ರಜೋದಯ ವರದಿ

**ಆಲೂರು:** ಉಳುವವನೇ ಭೂಮಿ ಒಡೆಯ ಎಂಬ ಕ್ರಾಂತಿಕಾರಕ ಭೂ ಸುಧಾರಣಾ ಕಾಯಿದೆ ತಂದ ಪಿತಾಮಹಾ ಡಿ.ದೇವರಾಜ ಅರಸು ರವರು ಎಂದು ತಹಶೀಲ್ದಾರ್ ಹೆಚ್. ಮಲ್ಲಿಕಾರ್ಜುನ್ ಅವರು ತಿಳಿಸಿದರು.



ಪಟ್ಟಣದ ಮಿನಿ ವಿಧಾನಸೌಧ ಆವ ರಣದಲ್ಲಿ ಏರ್ಪಡಿಸಲಾಗಿದ್ದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸುರವರ 110ನೇ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇವರಾಜ ಅರಸು ಅವರ ಆಡಳಿತ ಅವಧಿಯಲ್ಲಿ ಭೂ ಸುಧಾರಣೆ, ಜೀತ ಪದ್ಧತಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಕಾಯ್ದೆಗಳು, ಅಂಗವಿಕಲರಿಗೆ ಮಾಸಿಕ ವೇತನ, ವಿಧವಾ ವೇತನ ಸೇರಿ ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮೂಲಕ ಸಾಮಾಜಿಕ ಸುಧಾರಣೆಗೆ ಶ್ರಮಿಸಿದವರು ಎಂದರು.

ಸಾಹಿತಿ ಶಾಂತಅತ್ನಿ ಅವರು ಮಾತ ನಾಡಿ, ಡಿ.ದೇವರಾಜು ಅರಸುರವರು ಮೈಸೂರು ವಿಶ್ವ ವಿದ್ಯಾಲಯದಿಂದ ವಿಜ್ಞಾನ ಪದವಿ ಪಡೆದ ನಂತರ, ತಮ್ಮ ಹಳ್ಳಿಗೆ ಹಿಂತಿರುಗಿ ಕೃಷಿಯಲ್ಲಿ ತೊಡಗಿ ಕೊಂಡರು. ಈ ಸಮಯದಲ್ಲಿ ಅವರು ರಾಜಕೀಯದಲ್ಲಿ ಆಸಕ್ತಿ ಬೆಳೆಸಿ ಕೊಂಡು 1952 ರಲ್ಲಿ ಮೊದಲ ಬಾರಿಗೆ ರಾಜಕೀಯ ಪ್ರವೇಶ ಮಾಡಿದರು. ಮುಖ್ಯಮಂತ್ರಿಯಾದ ಸಂದರ್ಭ ದಲ್ಲಿ ಹಿಂದುಳಿದ ವರ್ಗಗಳ ಸರ್ವೇ ಕ್ಷಣೆಗಾಗಿ ಎಲ್.ಜಿ.ಹಾವನೂರುರವರ ನೇತೃತ್ವದಲ್ಲಿ ಆಯೋಗ ರಚಿಸಿದರು. ಈ ಆಯೋಗದ ವರದಿ ಆಧಾರದ ಮೇಲೆ ಶಿಕ್ಷಣ ಮತ್ತು ಉದ್ಯೋಗ ಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಜಾರಿಗೊಳಿಸಿದ ರೆಂದರು.

ಬಿ.ಸಿ.ಶಂಕರಾಚಾರ್ ಅವರು ಮಾತನಾಡಿ, ಡಿ.ದೇವರಾಜು ಅರಸುರವರು ಈ ರಾಜ್ಯದ ಮುಖ್ಯ ಮಂತ್ರಿಯಾದ ಸಂದರ್ಭದಲ್ಲಿ 20 ಅಂಶಗಳ ಕಾರ್ಯಕ್ರಮ ಇಡೀ ದೇಶದ ಗಮನ ಸೆಳೆಯಿತು. ಭೂ ಸುಧಾರಣೆ ಕಾಯ್ದೆಯನ್ನು ಜಾರಿಗೆ ತಂದು ಬಡವರ ಹಸಿವು ನೀಗಿಸಲು ಅಂತ್ಯೋದಯ ಯೋಜನೆ, ಸಮಾಜದಲ್ಲಿ ಇದ್ದಂತಹ ಕಂದಾ ಚಾರಗಳಾದ ದೇವದಾಸಿ ಪದ್ಧತಿ ನಿಷೇಧ, ವಿಧವಾ ಪುರ್ನವಿವಾಹಕ್ಕೆ ಕಾನೂನು ಜಾರಿಗೆ ತಂದರು ಎಂದರು.

ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಸುಬ್ರಮಣ್ಯ ಶರ್ಮ, ಬಿಇಒ ಕೃಷ್ಣೇಗೌಡ, ನೌಕರರ ಸಂಘದ ಅಧ್ಯಕ್ಷ ವರದರಾಜು ಇತರರು ಉಪಸ್ಥಿತರಿದ್ದರು.

# ಬಿಜೆಪಿ ಕಾರ್ಯಕರ್ತರಿಂದ ಧರ್ಮಸ್ಥಳ ಚಲೋ: ಸ್ವಾಗತ

• ಪ್ರಜೋದಯ ವರದಿ

**ಸಕಲೇಶಪುರ:** ಧರ್ಮಸ್ಥಳ ಕ್ಷೇತ್ರದ ವಿರುದ್ಧ ನಡೆಯುತ್ತಿರುವ ಅಪ ಪ್ರಚಾರ ಖಂಡಿಸಿ ಬಿಜೆಪಿ ಕಾರ್ಯ ಕರ್ತರು ಗುರುವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.



ಬೆಂಗಳೂರಿನ ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಮುಖಂಡ ತಮ್ಮೇಶ್ ಗೌಡ ನೇತೃತ್ವದಲ್ಲಿ ನೂರಾರು ಕಾರ್ಯಕರ್ತರು ಮೆರವಣಿಗೆಯಲ್ಲಿ ಸಕಲೇಶಪುರ ತಾಲ್ಲೂಕಿಗೆ ಆಗಮಿಸಿ ಧರ್ಮಸ್ಥಳದತ್ತ ಪ್ರಯಾಣ ಬೆಳೆಸಿ ದರು. ಬಾಳ್ಳುಪೇಟೆ ಸಕಲೇಶಪುರ ಬೈಪಾಸ್ ಸೇರಿ ಹಲವು ಕಡೆ ಜಿಲ್ಲಾ ಬಿಜೆಪಿ ಮುಖಂಡರು ಕಾರ್ಯ ಕರ್ತರಿಗೆ ಸ್ವಾಗತಿಸಿದರು.

ತಮ್ಮೇಶ್‌ಗೌಡ ಅವರು ಮಾತ ನಾಡಿ, ಕಾಂಗ್ರೆಸ್ ಸರ್ಕಾರ ಧರ್ಮ ಸ್ಥಳದ ವಿಷಯದಲ್ಲಿ ಕೈಗೊಂಡಿರುವ ನಿಲುವು ಖಂಡನೀಯ. ದೇವಸ್ಥಾನದ ಬಗ್ಗೆ ಸಾಮಾಜಿಕ ಜಾಲತಾಣ ಹಾಗು ಕೆಲವು ಯೂಟ್ಯೂಬ್ ಚಾನಲ್‌ಗಳಲ್ಲಿ ಅವಹೇಳನಕಾರಿ ವಿಷಯ ಪ್ರಸಾರ ಮಾಡುತ್ತಿದ್ದರೂ ಸರ್ಕಾರ ಕ್ರಮ ಕೈ ಗೊಂಡಿಲ್ಲ. ಹಿಂದೂ ಧರ್ಮದ ವಿರುದ್ಧ ವ್ಯವಸ್ಥಿತ ಪಿತೂರಿ ನಡೆಯು ತ್ತಿದೆ. ಯಾರೇ ತಪ್ಪಿತಸ್ಥರಾಗಿರಲಿ ಅವರ ವಿರುದ್ಧ ಕಾನೂನು ಕ್ರಮ ವಾಗಬೇಕು. ಆದರೆ ಶ್ರೀ ಕ್ಷೇತ್ರದ ವಿರುದ್ಧ ಅಪಪ್ರಚಾರ ಸರಿಯಲ್ಲ ವೆಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ರಾಜ್ಯ ಕಾರ್ಯದರ್ಶಿ ಮುನಿರಾಜು, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನೇತ್ರಾವತಿ ಮಂಜು ನಾಥ್, ಶಾಸಕ ಸಿಮೆಂಟ್ ಮಂಜು ಪತ್ನಿ ಪ್ರತಿಭಾ ಮಂಜು ನಾಥ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಗಿರೀಶ್, ಆಲೂರು ಮಂಡಲ ಅಧ್ಯಕ್ಷೆ ಉಮಾ ರವಿ ಕುಮಾರ್, ಶಕ್ತಿ ಕೇಂದ್ರ ಅಧ್ಯಕ್ಷಎಂ. ಎಸ್.ಶಿವಕುಮಾರ್ ಇದ್ದರು.

# ಕ್ರಿಕೆಟ್: ಸ್ಕಾಲರ್ಸ್ ಶಾಲೆಗೆ ತೃತೀಯ ಸ್ಥಾನ



**ಹಾಸನ: ಬೆಂಗಳೂರಿನ ಗೋಪಾಲನ್ ಅಂತರರಾಷ್ಟ್ರೀಯ ಶಾಲಾ ಮೈದಾನದಲ್ಲಿ ನಡೆದ ಸಿಐಎಸ್ಸಿಇ 14 ವರ್ಷದೊಳಗಿನವರ ಕ್ರಿಕೆಟ್ ಪಂದ್ಯಾವಳಿಯಲ್ಲಿ ನಗರದ ಸ್ಕಾಲರ್ಸ್ ಶಾಲೆಯ ತಂಡ ಮೂರನೇ ಸ್ಥಾನ ಪಡೆದಿದೆ.**
**ವಲಯ 8ರ ಪ್ರತಿನಿಧಿ ತಂಡವಾಗಿ ಪಾಲ್ಗೊಂಡ ಶಾಲೆಯ ವಿದ್ಯಾರ್ಥಿಗಳು ಕಠಿಣ ಪರಿಶ್ರಮ, ಶಿಸ್ತು ಮತ್ತು ಕ್ರೀಡಾ ಕೌಶಲ ಪ್ರದರ್ಶಿಸಿದರು. ಶಾಲೆಯ ಸಂಸ್ಥಾಪಕ ಹೆಚ್.ಎನ್.ಚಂದ್ರಶೇಖರ್ ಹಾಗು ಕಾರ್ಯದರ್ಶಿ ಮಮತಾ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.**

# ಗರ್ಭಕೊರಳು ಕ್ಯಾನ್ಸರ್ ಅರಿವು ಶಿಬಿರ

• ಪ್ರಜೋದಯ ವರದಿ

**ಆಲೂರು:** ರಾಧಮ್ಮ ಜನಸ್ಪಂದನ ಸಂಸ್ಥೆ ವತಿಯಿಂದ ಎಚ್.ಪಿ.ವಿ. ಲಸಿಕೆ ಬಗ್ಗೆ ವಿದ್ಯಾರ್ಥಿನಿ ಯರಿಗೆ ಗರ್ಭ ಕೊರಳು ಕ್ಯಾನ್ಸರ್ ಬಗ್ಗೆ ಅರಿವು ಕಾರ್ಯಕ್ರಮವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಆ.22 ರಂದು ಮಧ್ಯಾಹ್ನ 1 ಗಂಟೆಗೆ ಏರ್ಪಡಿಸಲಾ ಗಿದೆ ಎಂದು ಸಂಸ್ಥೆ ಅಧ್ಯಕ್ಷ ಹೇಮಂತ ಕುಮಾರ್ ತಿಳಿಸಿದ್ದಾರೆ.

ಶಿಬಿರದಲ್ಲಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ||ಸಾವಿತ್ರಿ, ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರಾದ ಡಾ.ಹೆಚ್.ಎ.ಪ್ರೇಮಲತಾ ಹಾಗೂ ಕಾರ್ಯದರ್ಶಿ ಡಾ.ಇಂಪನ ಭಾಗ ವಹಿಸಲಿದ್ದಾರೆ. ಸೆಪ್ಟೆಂಬರ್ ತಿಂಗಳಲ್ಲಿ 300ವಿದ್ಯಾರ್ಥಿನಿಯರಿಗೆಎಚ್.ಪಿ.ವಿ. ಲಸಿಕೆ ಹಾಕಿಸಲು ಅರ್ಜಿ ನೀಡಲಾ ಗುವುದು. ಮಾಹಿತಿಗಾಗಿ 90196 66011 ಸಂಪರ್ಕಿಸಲು ಕೋರಿದ್ದಾರೆ.

## ಜೇಡಿ ಮಣ್ಣಿನಿಂದ ಪರಿಸರ ಸ್ನೇಹಿ ಮೂರ್ತಿಗಳು ತಯಾರು | 250 ರಿಂದ 30 ಸಾವಿರ ರೂ. ವರಗೆ ಲಭ್ಯ

# ವಿವಿಧ ಬಗೆಯ ಗೌರಿ-ಗಣೇಶ ಮೂರ್ತಿಗಳು ಸಿದ್ಧ

-ಆರ್.ಶ್ರೀನಿವಾಸ್ ಉಳ್ಳಾವಳ್ಳಿ
• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಿಂದೂ ಸಾಂಪ್ರದಾಯಿಕ ಹಬ್ಬ ಗಣೇಶ ಚತುರ್ಥಿ ಸಮೀಪಿಸುತಿದ್ದಂತೆಯೇ ವಿಶೇಷ, ವಿಶಿಷ್ಟ ಶೈಲಿ ಹಾಗೂ ತರಾವರಿ ಮಾದ ರಿಯ ಗೌರಿ-ಗಣೇಶ ಮೂರ್ತಿಗಳ ತಯಾರಿಕೆ ಯಲ್ಲಿ ಕಲಾವಿದರು ತೊಡಗಿಕೊಂಡಿದ್ದಾರೆ.



ಪಿಒಪಿ ಹಾಗೂ ಇತರೆ ಕೆಮಿಕಲ್ ಬಳಕೆ ಯಿಂದ ಮೂರ್ತಿಗಳನ್ನು ತಯಾರು ಮಾಡು ವುದು ಮತ್ತು ಬಳಕೆ ಮಾಡುವುದನ್ನು ಸರ್ಕಾರ ನಿಷೇಧಿಸಿದ್ದು, ಪರಿಸರ ಸ್ನೇಹಿ ಮೂರ್ತಿಗಳನ್ನು ಪೂಜಿಸುವಂತೆ ಆದೇಶಿಸಿರುವುದರಿಂದ ಮಣ್ಣಿ ನಿಂದ ಮಾಡಿರುವ ಗೌರಿ-ಗಣೇಶ ಮೂರ್ತಿ ಗಳಿಗೆ ಸಾಕಷ್ಟು ಬೇಡಿಕೆ ಇದೆ.

ಈಗಾಗಲೇ ತಾಲ್ಲೂಕು ಕೇಂದ್ರ ಸೇರಿ ವ್ಯಾಪ್ತಿಯ ಹೋಬಳಿ ಕೇಂದ್ರಗಳಲ್ಲಿ ಶಿಲ್ಪಿಗಳು ವಿಭಿನ್ನ ಗಣೇಶ ಮೂರ್ತಿಗಳ ತಯಾರಿಕೆಯಲ್ಲಿ ತಲ್ಲೀನರಾಗಿದ್ದಾರೆ. ಅದರಂತೆಯೇ ತಾಲ್ಲೂಕಿನ ಹಿರೀಸಾವೆ ಗ್ರಾಮದ ಎಸ್.ಆರ್.ಮೋಹನ್ ಅವರು ಕಳೆದ 3 ತಿಂಗಳಿಂದ ವಿಶೇಷ ಹಾಗೂ ವಿಶಿಷ್ಟ ಶೈಲಿಯ ಗೌರಿ ಹಾಗೂ ಗಣೇಶ ಮೂರ್ತಿ ಗಳ ತಯಾರಿಕೆಯಲ್ಲಿ ನಿರತರಾಗಿದ್ದಾರೆ.

ಸುಮಾರು 30 ವರ್ಷಗಳಿಂದ ಗಣೇಶ ಮೂರ್ತಿ ತಯಾರಿಕೆಯನ್ನೇ ಕಾಯಕ ಮಾಡಿ ಕೊಂಡಿರುವ ಶಿಲ್ಪಿ ಎಸ್.ಆರ್.ಮೋಹನ್ ಅವರು ತಯಾರಿಸಿರುವ ಗೌರಿ-ಗಣೇಶ ಮೂರ್ತಿಗಳು ಮಂಡ್ಯ, ನಾಗಮಂಗಲ, ತುಮ ಕೂರು, ತುರುವೇಕೆರೆ, ಹೊಳೆನರಸೀಪುರ ಹಾಗೂ ಅರಸೀಕೆರೆ ಸೇರಿ ಹೊರ ರಾಜ್ಯ ಆಂಧ್ರ ಪ್ರದೇಶಕ್ಕೂ ಕೊಂಡೊಯ್ದಿರುವುದು ವಿಶೇಷವಾಗಿದೆ.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಕೆರೆಯಿಂದ 35 ಸಾವಿರ ರೂ. ಮೌಲ್ಯದ ಒಂದು ಟಿಪ್ಪರ್ ಲೋಡಿನಷ್ಟು ಜೆಡಿಮಣ್ಣು ತರಿಸಿದ್ದು ತನ್ನ ಕುಟುಂಬದ ಸದಸ್ಯರ ಸಹಕಾರದೊಂದಿಗೆ ಗೌರಿ-ಗಣೇಶ ಮೂರ್ತಿಗಳ ತಯಾರಿಕೆ ನಡೆ ಯುತ್ತಿದೆ. ಈಗಾಗಲೇ ಸುಮಾರು 25 ಮೂರ್ತಿ ಗಳು ಮಾರಾಟವಾಗಿದ್ದು 35ಕ್ಕೂ ಹೆಚ್ಚು ಮೂರ್ತಿಗಳಿಗೆ ಸಾರ್ವಜನಿಕರು ಮುಂಗಡ ಹಣ ಪಾವತಿಸಿದ್ದಾರೆಂದು ಕಲಾವಿದ ಮೋಹನ್ ತಿಳಿಸಿದರು.

ಒಂದು ಅಡಿಯಿಂದ ಗ್ರಾಹಕರ ಬೇಡಿಕೆ ಯಂತೆ 12 ಅಡಿ ಎತ್ತರದ ಮೂರ್ತಿಗಳು ಅವರ ಕೈಚಳಕದಲ್ಲಿ ಮೂಡಿ ಬರಲಿವೆ. 250 ರೂ. ನಿಂದ 30 ಸಾವಿರ ರೂ. ವರಗಿನ ಬೆಲೆಯ ಮೂರ್ತಿಗಳು ಅವರಲ್ಲಿ ದೊರೆಯಲಿವೆ.

ಪ್ರತಿ ವರ್ಷ 150 ರಿಂದ 200ಕ್ಕೂ ಹೆಚ್ಚು ಮೂರ್ತಿಗಳನ್ನು ತಯಾರಿಸಿ ಮಾರಾಟ ಮಾಡ ಲಿದ್ದಾರೆ. ವಿಭಿನ್ನ ಶೈಲಿಯ ಮೂರ್ತಿಗಳು ಲಭ್ಯವಿರುವುದರಿಂದ ವರ್ಷದಿಂದ ವರ್ಷಕ್ಕೆ ನಾವು ತಯಾರಿಸುವ ಮೂರ್ತಿಗಳಿಗೆ ಬೇಡಿಕೆ ಹೆಚ್ಚುತ್ತಿದೆ ಎಂದು ಶಿಲ್ಪಿ ಎಸ್.ಆರ್.ಮೋಹನ್ ಮಾಹಿತಿ ನೀಡಿದರು.

ಮೂರ್ತಿಗಳ ತಯಾರಿಕೆಗೆ ಹದವಾದ ಜೆಡಿಮಣ್ಣು ಮೊದಲೆಲ್ಲ ತಾಲ್ಲೂಕು ವ್ಯಾಪ್ತಿಯ ಕೆಲವೇ ಕೆಲ ಕೆರೆಗಳಲ್ಲಿ ಸಿಗುತಿತ್ತು. ಆದರೆ ಏತ ನೀರಾವರಿ ಯೋಜನೆಯಡಿ ಕೆರೆಗಳಿಗೆ ನೀರು ತುಂಬಿಸುವ ವಿಚಾರ ತಿಳಿದು ರೈತರು ಜೆಸಿಬಿ ಯಂತ್ರ ಬಳಕೆ ಮಾಡಿಕೊಂಡು ಟ್ರ್ಯಾಕ್ಟರ್‌ಗಳ ಮೂಲಕ ಕೆರೆಗಳ ಮೇಲ್ಮಣ್ಣನ್ನು ಸಂಪೂ ರ್ಣವಾಗಿ ಹೂಳು ತೆಗೆದು ಕೃಷಿ ಜಮೀನುಗಳಿಗೆ ಸಾಗಿಸಲಾಗಿದೆ.

ಜೊತೆಗೆ ಕಳೆದ 3-4 ವರ್ಷಗಳಿಂದ ವ್ಯಾಪ್ತಿಯ ಬಹುತೇಕ ಕೆರೆಗಳಿಗೆ ನೀರು ತುಂಬಿಸಲಾಗಿದ್ದು, ಕಳೆದ ವರ್ಷ ಹೆಚ್ಚು ಮಳೆ ಸುರಿದಿದ್ದರಿಂದ ತುಂಬಿದ ಕೆರೆಗಳಲ್ಲಿ ನೀರಿನ ಪ್ರಮಾಣ ಇನ್ನೂ ಕಡಿಮೆಯಾಗಿಲ್ಲ. ಆದ್ದರಿಂದ ಸದ್ಯಕ್ಕೆ ಸ್ಥಳೀಯವಾಗಿ ಉತ್ತಮ ಮಣ್ಣು ಲಭ್ಯ ವಾಗದ ಕಾರಣ ಹೊರ ಜಿಲ್ಲೆಗಳಿಂದ ತರಿಸು ವುದು ಸ್ವಲ್ಪ ದುಬಾರಿ ಎನ್ನಲಾಗಿದೆ.

ಈಗಾಗಲೇ ಸಿದ್ದಗೊಂಡಿರುವ ಗೌರಿ-ಗಣೇಶ ಮೂರ್ತಿಗಳು ಮಾರುಕಟ್ಟೆಗೆ ಆಗಮಿಸುತಿದ್ದು ಪಟ್ಟಣದ ಜೊತೆಗೆ ಹಿರೀಸಾವೆ, ನುಗ್ಗೇಹಳ್ಳಿ, ಶ್ರವಣಬೆಳಗೊಳ, ಮಟ್ಟನವಿಲೆ, ಗೌಡಗೆರೆ, ಜುಟ್ಟನಹಳ್ಳಿ, ದಿಡಗ, ಕಿರೀಸಾವೆ ಗಡಿ ಸೇರಿ ಬಹುತೇಕ ಕಡೆ ಮೂರ್ತಿಗಳು ಲಭ್ಯವಾಗಲಿವೆ.

**ಪಿಒಪಿ ಮೂರ್ತಿಗಳ ಮಾರಾಟ:** ನಾಗ ಮಂಗಲ, ಬೆಳ್ಳೂರು ಕ್ರಾಸ್ ಸೇರಿ ವಿವಿಧೆಡೆಗೆ ಪಿಒಪಿಯಿಂದ ತಯಾರಾಗಿರುವ ಮೂರ್ತಿಗಳು ಲಗ್ಗೆ ಇಟ್ಟಿವೆ. ಪಿಒಪಿ ಹಾಗೂ ಹಾನಿಕಾರಕ ಬಣ್ಣ ಹಾಗೂ ವಸ್ತುಗಳಿಂದ ತಯಾರಾಗುವ ಮೂರ್ತಿ ಗಳನ್ನು ಹಬ್ಬದ ನಂತರ ಕೆರೆ ಕಟ್ಟೆಗಳಿಗೆ ವಿಸ ರ್ಜಿಸಲಿದ್ದು ಇದರ ಪರಿಣಾಮ ಜಲಚರಗಳು ಹಾಗೂ ನೀರನ್ನು ಉಪಯೋಗಿಸುವ ಜನ-ಜಾನುವಾರುಗಳ ಆರೋಗ್ಯದ ಮೇಲೆ ದುಷ್ಪರಿ ಣಾಮ ಉಂಟಾಗಲಿದೆ. ಸರ್ಕಾರ ಪಿಒಪಿ ಹಾಗೂ ಹಾನಿಕಾರಕ ಬಣ್ಣ ಹಾಗೂ ಇತರೆ ವಸ್ತುಗಳಿಂದ ಮೂರ್ತಿಗಳನ್ನು ತಯಾರಿಸದಂತೆ ನಿಷೇಧಿಸಿದ್ದರೂ ಈ ಧಂದೆ ನಿಂತಿಲ್ಲ. ಈಗಾಗಲೇ ಪಿಒಪಿ ಯಿಂದ ತಯಾರಿಸಿರುವ ಮೂರ್ತಿಗಳು ಮಾರುಕಟ್ಟೆಗಳಿಗೆ ಲಗ್ಗೆ ಇಟ್ಟಿದ್ದು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕಡಿವಾಣ ಹಾಕುವಲ್ಲಿ ಮುಂದಾಗಬೇಕೆಂಬುದು ಕಲಾವಿದರ ಹಾಗೂ ಸಾರ್ವಜನಿಕರ ಮನವಿಯಾಗಿದೆ.

**ಸನಿಹದ ಯಾವುದೇ ಕೆರೆಗಳಲ್ಲಿ ಉತ್ತಮ ಜೇಡಿಮಣ್ಣು ಸಿಗದ ಕಾರಣ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಕೆರೆಯಿಂದ ಜೇಡಿ ಮಣ್ಣನ್ನು ತರಿಸಲಾಗಿದ್ದು, ಕಳೆದ 3 ತಿಂಗಳಿಂದ ಮೂರ್ತಿಗಳ ತಯಾರಿಕೆಯಲ್ಲಿ ತೊಡಗಲಾ ಗಿದೆ. 250 ರಿಂದ 30 ಸಾವಿರ ರೂ. ವರೆಗಿನ ಬೆಲೆಯ ಮೂರ್ತಿಗಳು ಲಭ್ಯ ವಿದೆ. ಸರ್ಕಾರದ ಆದೇಶದಂತೆ ಪರಿಸರ ಸ್ನೇಹಿ ಮೂರ್ತಿಗಳ ತಯಾರಿಕೆ ಹಾಗೂ ಪ್ರತಿಷ್ಠಾಪ ನೆಗೆ ಅಗತ್ಯ ಆದ್ಯತೆ ನೀಡಿದರೆ ಪರಿಸರವನ್ನು ಉತ್ತಮವಾಗಿ ಕಾಪಾಡಿ ಕೊಳ್ಳಬಹುದು.**
**-ಎಸ್.ಆರ್.ಮೋಹನ್,** ಶಿಲ್ಪಿ, ಹಿರೀಸಾವೆ

**ಗಣೇಶ ಚತುರ್ಥಿ ಸಮೀಪಿಸುತಿದ್ದು ಸರ್ಕಾರದ ಆದೇಶದಂತೆ ಪರಿಸರಕ್ಕೆ ಮಾರಕವಾದ ಅಪಾಯಕಾರಿ ಪಿಒಪಿ ಅಥವಾ ಇತರೆ ಅಪಾಯಕಾರಿ ಬಣ್ಣ, ವಸ್ತುಗಳ ಬಳಕೆ ಬದಲು ಶಿಲ್ಪಿಗಳು ಜೆಡಿಮಣ್ಣು ಉಪಯೋಗಿಸಿ ಮೂರ್ತಿಗಳನ್ನು ತಯಾರಿಸುವುದು ಅಗತ್ಯ ಹಾಗೂ ಸೂಕ್ತ. ಪರಿಸರ ಉತ್ತಮವಾಗಿದ್ದಲ್ಲಿ ಮಾತ್ರ ನಮ್ಮಗಳ ಆರೋಗ್ಯ ವೃದ್ಧಿಯಾಗಲು ಸಾಧ್ಯ. ಆದ್ದರಿಂದ ಸಾರ್ವಜನಿಕರೂ ಸಹ ಪರಿಸರ ಸ್ನೇಹಿ ಗೌರಿ-ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಿಸುವುದು ಸೂಕ್ತವಾಗಿದೆ.**
**-ಸಿ.ಎನ್.ಬಾಲಕೃಷ್ಣ,** ಶಾಸಕ

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K C M Y K C M Y K C M Y K